ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 243 RNI Number : KNKAN/25/A2770 14-09-2026 Monday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :243 ರಾಯಚೂರು 14-09-2026 ಸೋಮವಾರ ಪುಟ 04 ಬೆಲೆ ರೂ.2/- ಮೊ:8660146563

ಅಂತಾರಾಷ್ಟ್ರೀಯ ಮಟ್ಟಕ್ಕೆ ವ್ಯಾಪಿಸಿದ ನಕಲಿ ಔಷಧಿ ಜಾಲ..!

ಬೆಂಗಳೂರು,ಸೆ.13-

ನಕಲಿ ಔಷಧ ಜಾಲ ಅಂತಾರಾಷ್ಟ್ರೀಯ ಮಟ್ಟದವರೆಗೆ ವ್ಯಾಪಿಸಿದೆ ಎಂದು ಎಸ್‌ಐಟಿ ತನಿಖೆಯಿಂದ ತಿಳಿದು ಬಂದಿದೆ.ಈ ದಂಧೆಯ ಪ್ರಮುಖ ಆರೋಪಿಗಳು ಟರ್ಕಿಯಿಂದ ನಕಲಿ ಲೇಬಲ್‌ಗಳನ್ನು ತರಿಸಿ ನೂರಕ್ಕೂ ಹೆಚ್ಚು ಔಷಧಿಗಳನ್ನು ಆಸ್ಪತ್ರೆಗಳಿಗೆ ಸರಬರಾಜು ಮಾಡುತ್ತಿದ್ದರು ಎಂದು ಗೊತ್ತಾಗಿದೆ.

ಇತ್ತೀಚೆಗೆ ಎಸ್‌ಐಟಿ ಕರ್ನಾಟಕ ಸೇರಿದಂತೆ ಆರು ರಾಜ್ಯಗಳಲ್ಲಿ ದಾಳಿ ನಡೆಸಿತು. ಈ ಸಂದರ್ಭದಲ್ಲಿ ನಗರದ ಮಿರ್ಜವ ವೃತ್ತದಲ್ಲಿನ ಕೃಪಾ ಹೆಲ್ತ್ ಕೇರ್‌ನ ಮೇಲೆ ದಾಳಿ ಮಾಡಿ ಪರಿಶೀಲಿಸಿದಾಗ ಅಪಾರ ಪ್ರಮಾಣದ ನಕಲಿ ಔಷಧಿಗಳು ಮತ್ತು ನಕಲಿ ಬಿಲ್‌ಗಳು ಪತ್ತೆಯಾಗಿದ್ದವು.

ಇಲ್ಲಿಂದ ಸುಮಾರು ನೂರಕ್ಕೂ ಹೆಚ್ಚು ಮೆಡಿಕಲ್ ಸ್ಟೋರ್ ಮತ್ತು ಆಸ್ಪತ್ರೆಗಳಿಗೆ ನಕಲಿ ಔಷಧಿಗಳು ಸರಬರಾಜು ಆಗಿರುವುದು ಸಹ ಕಂಡು ಬಂದಿತು.ಈ ಹಿನ್ನಲೆಯಲ್ಲಿ ಅದರ ಮಾಲೀಕ ವೀರೇಶ್‌ಕುಮಾರ್ ನನ್ನು ಎಸ್‌ಐಟಿ ಬಂಧಿಸಿ ವಿಚಾರಣೆಗೆ ಒಳಪಡಿಸಿದಾಗ ಮತ್ತಷ್ಟು ಈ ಸ್ಫೋಟಕ ಮಾಹಿತಿಗಳು ಹೊರ ಬಿದ್ದಿವೆ.

ಆರೋಪಿಗಳು ಕ್ಯಾನ್ಸರ್ ಔಷಧಿಗಳನ್ನು ವಿದೇಶಗಳಿಗೆ ಅಕ್ರಮವಾಗಿ ಕಳುಹಿಸುತ್ತಿದ್ದರು ಎಂಬುವುದು ಸಹ ತನಿಖೆಯಿಂದ ಕಂಡು ಬಂದಿದೆ.ಆರೋಪಿ ವೀರೇಶ್ ಕುಮಾರ್ ಮೂಲತಃ ರಾಜಸ್ಥಾನದವರಾಗಿದ್ದು, ದಶಕಗಳ ಹಿಂದೆಯೇ ನಗರಕ್ಕೆ ಕೆಲಸ ಹುಡಿಕಿಕೊಂಡು ಬಂದು ತನ್ನ ಸಂಬಂಧಿಗೆ ಸೇರಿದ ಔಷಧಿ ಮಾರಾಟ ಏಜೆನ್ಸಿಯಲ್ಲಿ ಮಾರಾಟ ಪ್ರತಿನಿಧಿಯಾಗಿ ಕೆಲಸ ಆರಂಭಿಸಿದ.

ನಂತರ ಔಷಧಿ ವ್ಯಾಪಾರದ ಬಗ್ಗೆ ಸಂಪೂರ್ಣ ಮಾಹಿತಿಗಳನ್ನು ಪಡೆದುಕೊಂಡು ಕೊನೆಗೆ ಸ್ವತಃ ಕೃಪಾ ಹೆಲ್ತ್‌ಕೇರ್ ಎಂಬ ಹೆಸರಿನಲ್ಲಿ ಪ್ರತ್ಯೇಕ ಸಂಸ್ಥೆ ಆರಂಭಿಸಿ ಔಷಧ ಮಾರಾಟವನ್ನು ಪ್ರಾರಂಭಿಸಿದ. ಈ ಸಂದರ್ಭದಲ್ಲಿ ನಕಲಿ ಔಷಧಿ ಮಾರಾಟ ಜಾಲದ ಪ್ರಮುಖ ಆರೋಪಿ ಪ್ರಶಾಂತ್ ಪರಿಚಯವಾಗಿದ್ದು, ಇಬ್ಬರು ಸೇರಿ ಈ ದಂಧೆಯನ್ನು ನಡೆಸುತ್ತಿದ್ದರು ಎಂದು ತಿಳಿದು ಬಂದಿದೆ.

ಹೋರಾಟ ಮಾಡುವವರಿಗೆ ಪಕ್ಷದಲ್ಲಿ ಸ್ಥಾನ ಸಿಗುತ್ತದೆ : ಡಿ.ಕೆ.ಶಿ

ಬೆಂಗಳೂರು,ಸೆ.13-

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಸಮ್ಮುಖದಲ್ಲಿ ಮಾಜಿ ಶಾಸಕ ಹಾಗೂ ಬಿಜೆಪಿ ಮುಖಂಡ ನೆ.ಲ.ನರೇಂದ್ರ ಬಾಬು ರವಿವಾರ ನಗರದ ಕ್ವೀನ್ಸ್ ರಸ್ತೆಯ ಭಾರತ್ ಜೋಡೋ ಭವನದಲ್ಲಿ ಅಧಿಕೃತವಾಗಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.ಇದೇ ವೇಳೆ ನೆ.ಲ.ನರೇಂದ್ರಬಾಬು ಅವರನ್ನು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಪಕ್ಷದ ಧ್ವಜ ನೀಡಿ ಸ್ವಾಗತಿಸಿದರು.

ಈ ಸಂದರ್ಭ ಕಾರ್ಯಕ್ರಮದಲ್ಲಿ ಮಾತನಾಡಿದ ಸಿಎಂ ಡಿ.ಕೆ.ಶಿವಕುಮಾರ ಎಲ್ಲಿ ಶ್ರಮ ಇರುತ್ತದೆಯೋ ಅಲ್ಲಿ ಫಲ ಸಿಗುತ್ತದೆ. ಹೋರಾಟ ಮಾಡುವವರಿಗೆ ಪಕ್ಷದಲ್ಲಿ ಒಂದಲ್ಲ ಒಂದು ಸ್ಥಾನ ಸಿಗುತ್ತದೆ.



ಸಮಾಜದಲ್ಲಿ ಜಾತಿ ಗುರುತಿಗಿಂತ ವ್ಯಕ್ತಿಯ ಕ್ರಿಯಾಶೀಲತೆ ಮತ್ತು ಶ್ರಮ ಮುಖ್ಯ ಎಂದರು.

ನಾವೆಲ್ಲರೂ ಹಿಂದೂಗಳೇ. ಧರ್ಮದ ವಿಚಾರದಲ್ಲಿ ಬಿಜೆಪಿ ಮಾಡುತ್ತಿರುವುದು ನಾಟಕ. ಎಲ್ಲ ಜಾತಿ ಮತ್ತು ಧರ್ಮಗಳನ್ನು ಒಳಗೊಂಡಿರುವುದೇ ಕಾಂಗ್ರೆಸ್‌ನ ನಿಲುವು. ಮಾನವೀಯತೆ ತಮ್ಮ ಪಕ್ಷದ ಆಧಾರ ಎಂದು ಅವರು ತಿಳಿಸಿದರು.

ಬಿಜೆಪಿಯಲ್ಲಿ ನಾಯಕತ್ವಕ್ಕಾಗಿ ಆಂತರಿಕ ಪೈಪೋಟಿ ನಡೆಯುತ್ತಿದೆ. ಆರ್.ಅಶೋಕ್ ಅವರನ್ನು ಇಳಿಸಬೇಕಾ, ಬಿ.ವೈ.ವಿಜಯೇಂದ್ರ ಅವರನ್ನು ಇಳಿಸಬೇಕಾ ಅಥವಾ ದಿಲ್ಲಿಯಿಂದ ಯಾರನ್ನಾದರೂ ಕರೆತರಬೇಕಾ ಎಂಬ ಚರ್ಚೆ ನಡೆಯುತ್ತಿದೆ ಎಂದು ಡಿ.ಕೆ.ಶಿವಕುಮಾರ್ ವ್ಯಂಗ್ಯವಾಡಿದರು.

ಹಿಂದೆ ಡಬಲ್ ಇಂಜಿನ್ ಸರಕಾರದ ಅವಧಿಯಲ್ಲಿ ಬಿಜೆಪಿಯವರು ಬೆಂಗಳೂರಿಗೆ ಏನು ಕೊಡುಗೆ ನೀಡಿದ್ದಾರೆ. ಸಂಚಾರ ದಟ್ಟಣೆ ಸಮಸ್ಯೆ, ಸಾರ್ವಜನಿಕ ಸಾರಿಗೆ ಸೇರಿದಂತೆ ನಗರದ ಸಮಸ್ಯೆಗಳನ್ನು ಸಂಸದ ತೇಜಸ್ವಿ ಸೂರ್ಯ ಯಾವಾಗಲಾದರೂ ಸರಿ ಮಾಡಿದ್ದಾರೆಯೇ ಎಂದು ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.

ಇದೇ ವೇಳೆ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ವಿರುದ್ಧವೂ ವಾಗ್ದಾಳಿ ನಡೆಸಿದ ಡಿ.ಕೆ.ಶಿವಕುಮಾರ್, ಪ್ರತಿದಿನ ಹೊಸ ಬಾಂಬ್ ಹಾಕುತ್ತೇನೆ ಎನ್ನುವುದಕ್ಕಿಂತ ಕೈಗಾರಿಕೆಗಳನ್ನು ಸ್ಥಾಪಿಸಿ ಉದ್ಯೋಗ ಸೃಷ್ಟಿಸುವ ಕೆಲಸ ಮಾಡಲಿ. ನಮ್ಮ ವಿರುದ್ಧದ ತನಿಖೆಗಳ ಕುರಿತು ಪ್ರಶ್ನಿಸುವವರು, ಅವರ ವಿರುದ್ಧ ತನಿಖೆ ನಡೆದಾಗ ನ್ಯಾಯಾಲಯದಿಂದ ತಡೆ ಪಡೆಯುವುದೇಕೆ ಎಂದು ಪ್ರಶ್ನಿಸಿದರು.

ಎಚ್.ಡಿ.ಕುಮಾರಸ್ವಾಮಿ ಅವರು ನನ್ನನ್ನು ಅಧಿಕಾರದಿಂದ

ಮೂರನೇಯ ಪುಟಕ್ಕೆ


ಗೌರಿ-ಗಣೇಶ ಹಬ್ಬಕ್ಕೆ ಪೊಲೀಸ್ ಬಿಗಿ ಬಂದೋಬಸ್ತ್

ನಗರದಲ್ಲಿ ಖಾಕಿ ಪಡೆ ಪಥಸಂಚಲನ; ಅಹಿತಕರ ಘಟನೆಗಳಿಗೆ ಅವಕಾಶವಿಲ್ಲ: ಎಸ್ಪಿ

ರಾಯಚೂರು,ಸೆ.13-

ಗೌರಿ-ಗಣೇಶ ಹಬ್ಬದ ಹಿನ್ನೆಲೆಯಲ್ಲಿ ನಗರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಹಾಗೂ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದಂತೆ ರಾಯಚೂರು ಜಿಲ್ಲಾ ಪೊಲೀಸ್ ಇಲಾಖೆ ಕಟ್ಟೆಚ್ಚರ ವಹಿಸಿದೆ. ಇದರ ಭಾಗವಾಗಿ ಶನಿವಾರ ನಗರದ ಪ್ರಮುಖ ರಸ್ತೆಗಳಲ್ಲಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಪಥಸಂಚಲನ ನಡೆಸಿ, ಸಾರ್ವಜನಿಕರಲ್ಲಿ ಸುರಕ್ಷತೆಯ ಭರವಸೆ ಮೂಡಿಸಿದರು.

ಗಂಜ್ ವೃತ್ತದಿಂದ ಆರಂಭವಾದ ಪಥಸಂಚಲನವು ಚಂದ್ರಮೌಳೇಶ್ವರ ವೃತ್ತ, ನೇತಾಜಿ



ವೃತ್ತ, ತೀನ್ ಕಂದೀಲ್ ಮಾರ್ಗವಾಗಿ ಖಾಸಬಾವಿವರೆಗೆ ನಡೆಯಿತು. ಹಬ್ಬದ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು, ಭಕ್ತರು ಹಾಗೂ ಗಣೇಶೋತ್ಸವ ಸಮಿತಿಗಳು ಸೇರುವ ಹಿನ್ನೆಲೆಯಲ್ಲಿ ಸೂಕ್ಷ್ಮ ಪ್ರದೇಶಗಳಲ್ಲಿ ಪೊಲೀಸ್ ನಿಗಾ ಮತ್ತು ಭದ್ರತಾ ವ್ಯವಸ್ಥೆಯನ್ನು ಬಿಗಿಗೊಳಿಸಲಾಗಿದೆ.

ಹಬ್ಬವನ್ನು ಶಾಂತಿಯುತವಾಗಿ ಆಚರಿಸುವಂತೆ ಸಾರ್ವಜನಿಕರಿಗೆ ಮನವಿ ಮಾಡಿರುವ ಪೊಲೀಸ್ ಇಲಾಖೆ, ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವ ಯಾವುದೇ ಚಟುವಟಿಕೆಗಳನ್ನು ಸಹಿಸುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಪಥಸಂಚಲನದ ಮೂಲಕ ನೀಡಿತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಶು ಗಿರಿ, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಜಿ. ಹರೀಶ್, ಡಿವೈಎಸ್‌ಪಿ ಶಾಂತವೀರ ಸೇರಿದಂತೆ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಪಥಸಂಚಲನದಲ್ಲಿ ಭಾಗವಹಿಸಿದ್ದರು.

ನೀರಿನ ಸಮಸ್ಯೆ ಪ್ರತಿಭಟನೆಯಲ್ಲಿ ಕಾಂಗ್ರೆಸ್-ಜೆಡಿಎಸ್ ಮುಖಂಡರ ಮಾತಿನ ಚಕಮಕಿ



ಸಿಂಧನೂರು ತಾಲ್ಲೂಕಿನ ಬೂದಿಹಾಳ ಕ್ಯಾಂಪಿನಲ್ಲಿ ಕೆಳಭಾಗದ ರೈತರಿಗೆ ನೀರಿನ ಸಮಸ್ಯೆ ಪರಿಹರಿಸುವಂತೆ ಆಗ್ರಹಿಸಿ ನಡೆದ ರೈತರ ಪ್ರತಿಭಟನೆಯಲ್ಲಿ ರಾಜಕೀಯ ಭಾಷಣದ ವಿಚಾರವಾಗಿ ಕಾಂಗ್ರೆಸ್ ಹಾಗೂ ಜೆಡಿಎಸ್ ಮುಖಂಡರ ನಡುವೆ ಮಾತಿನ ಚಕಮಕಿ ನಡೆಯಿತು. ಪರಿಣಾಮ ಕೆಲಕಾಲ ಸ್ಥಳದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು.

ಪ್ರತಿಭಟನೆಯಲ್ಲಿ ಮಾತನಾಡಿದ ಜೆಡಿಎಸ್ ಯುವ ಮುಖಂಡ ಅಭಿಷೇಕ ನಾಡಗೌಡ, ಮೇಲ್ಭಾಗದ ರೈತರು ಹೆಚ್ಚಿನ ಪ್ರಮಾಣದಲ್ಲಿ ನೀರು ಬಳಸಿಕೊಳ್ಳುತ್ತಿರುವುದರಿಂದ ಸಿಂಧನೂರಿನ ವಿವಿಧ ಕಾಲುವೆಗಳಿಗೆ ಸಮರ್ಪಕವಾಗಿ ನೀರು ತಲುಪುತ್ತಿಲ್ಲ ಎಂದು ಆರೋಪಿಸಿದರು. ರೈತರ ಸಮಸ್ಯೆಗಳನ್ನು ಪರಿಹರಿಸಬೇಕಾದ ಜನಪ್ರತಿನಿಧಿಗಳೇ ರೈತರೊಂದಿಗೆ ಪ್ರತಿಭಟನೆ ನಡೆಸುತ್ತಿರುವುದು ಸರಿಯಲ್ಲ ಎಂದು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಅಲ್ಲದೆ, ಜೋಳ ಬೆಳೆದ ರೈತರಿಗೆ ಇನ್ನೂ ಹಣ ಪಾವತಿಯಾಗಿಲ್ಲ ಏಕೆ ಎಂದು ಪ್ರಶ್ನಿಸಿದರು.

ಈ ವೇಳೆ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ಮುಖಂಡ ವೀರರಾಜು, ಜೋಳದ ಹಣವನ್ನು ಕುಮಾರಸ್ವಾಮಿ ಕೊಡಿಸಬೇಕು ಎಂದು ಹೇಳಿದಾಗ ಅಭಿಷೇಕ ನಾಡಗೌಡ ಆಕ್ಷೇಪ ವ್ಯಕ್ತಪಡಿಸಿದರು. ಇದರಿಂದ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿದ್ದು, ಕೆಲಕಾಲ ಪ್ರತಿಭಟನಾ ಸ್ಥಳದಲ್ಲಿ ಗಲಾಟೆಯ ವಾತಾವರಣ ನಿರ್ಮಾಣವಾಯಿತು.

ಸ್ಥಳಕ್ಕೆ ಆಗಮಿಸಿದ ಗ್ರಾಮೀಣ ಪೊಲೀಸ್ ಠಾಣೆಯ ಪಿಎಸ್‌ಐ ಮೌನೇಶ ರಾಠೋಡ್

ಮೂರನೇಯ ಪುಟಕ್ಕೆ

ಮನುಷ್ಯಗೆ ಅಧ್ಯಾತ್ಮಿಕ ಚಿಂತನೆ ನಡೆಸಿ

ರಾಯಚೂರು ಸೆ.13

ಇಂದಿನ ಸಮಾಜದಲ್ಲಿ ಮನುಷ್ಯ ಚಿಂತನೆಯನ್ನು ಪುರಾಣದಲ್ಲಿ ಅಧ್ಯಾತ್ಮಿಕ ದೃಷ್ಟಿಕೋನದಿಂದ ಗುರುವುಗಳ ಅಶ್ವೀರಾದ ದಿಂದ ಮುಖ್ಯ ಎಂದು ಗ್ರಾಮೀಣ ಶಾಸಕ ಬಸನಗೌಡ ದದ್ದಲ್ ಹೇಳಿದರು ಬಾನುವಾರ ನಗರದ ಕಿಲ್ಲೆ ಬೃಹನ್ಮಠದಲ್ಲಿ ಒಂದು ತಿಂಗಳಗಳ ಪರಿಯಾಂತರವಾಗಿ ಸಾಗಿ ಬಂದಿರುವ 102 ನೇ ವರ್ಷದ ಶ್ರಾವಣ ಮಾಸದ ಅಂಗವಾಗಿ ಸಂತ ಶಿಶುನಾಳ ಶರೀಫರ ಜೀವನದರ್ಶನ ಪ್ರವಚನದ ಸಮಾರೋಪ ಸಮಾರಂಭ ಕಾರ್ಯಕ್ರಮವವನ್ನು ಉದ್ಘಾಟಿಸಿ ಮಾತಾನಾಡಿದರು.

ಪುರಾಣವನ್ನು ಕೇಳು ವು ಮನಸ್ಥಿತಿಯನ್ನು ತಿಳಿಸುವ ಮೂಲಕ ಅಂದಕಾರವನ್ನು ಒಗ ಲಾಡಸಿ ರೈತಾಪಿ ವರ್ಗಕೆ ಒಳತಿ ಮಾಡಲು



ಧಾರ್ಮಿಕ ವಿಚಾರಗಳ ಬಗ್ಗೆ ವಿವರಿಸಿದರು. ಮಠದಲ್ಲಿ ಸಂತ ಶಿಶುನಾಳರ ಗುರು ಗೋವಿಂ ದರ ಶಿಷ್ಯರಾಗಿರುವ ಬಗ್ಗೆ ಮಾತಾನಾಡಿದರು.ವಿದಾನ ಪರಿಷತ್ ಸದಸ್ಯ ವಸಂತಕುಮಾರ್ ಮಾತಾ ನಾಡುತ್ತಾ ಸಮಾಜದಲ್ಲಿ ನೈತಿಕ ಮೌಲ್ಯಗಳು ಮರೆಯಾಗುತ್ತಿವೆ ಅದ ನ್ನು ಎತ್ತಿ ಹಿಡಿಯುವುದು ನಮ್ಮ ಆದ್ಯ ಕರ್ತವ್ಯ ಎಂದು ಹೇಳಿದರು ನೈತಿಕತೆ ಮತ್ತು ಆರೋಗ್ಯಕರ ಸ ಮಾಜ ನಿರ್ಮಾಣ ಕಾರ್ಯದಲ್ಲಿ ಶ್ರೀಮಠ ತೊಡಗಿದೆ ಎಂದರು.

ದಿವ್ಯ ಸಾನಿಧ್ಯವನ್ನು ಕಿಲ್ಲೆಬೃಹನ್ಮಠದ ಪೀಠಾಧಿಪತಿ ಗಳಾದ ಶ್ರೀ ಶಾಂತ ಮಲ್ಲ ಶಿವಾಚಾರ್ಯ ಮಹಾಸ್ವಾಮ.ಗಬ್ಬೂರು ಬೂದಿ ಬಸವ ಶಿವಾಚಾರ್ಯ.ಸುಲ್ತಾನ್ ಪುರ ಶಂಭು ಸೋಮನಾಥ ಶಿವಾಚಾರ್ಯ ಮಹಾ ಸ್ವಾಮಿಗಳುವಹಿಸಿ ಕೊಂಡಿದ್ದರು ಮುಖ್ಯ ಅತಿಥಿಗಳಾಗಿ,ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ದರೂರ್ ಬಸನಗೌಡ ಜಿ ಶಿವಮೂರ್ತಿ,ಕಡಗೊಳ್ ಆಂಜನೇಯ,ಕಾಂಗ್ರೆಸ್ ಪಕ್ಷದ ಜಿಲ್ಲಾದ್ಯಕ್ಷ ಶಾಂತಪ್ಪ,ಡಾ.ಜವುಳಿ ನಿಜ ಗು ಣ ಶಿವ ಯೆಗಪ್ಪ,ರವೀಂದ್ರ ಜಾಲದಾರ್,ಶಾಲಂ,ಚೆನ್ನಪ್ಪ,ಪರಮೇಶ್ವರ ಸಾಲಿ ಮಠ,ತಾಲುಕ ಪಂಚ ಗ್ಯಾರಂಟಿ ಸಮಿತಿ ಅದ್ಯಕ್ಷ ಪವನ್ ಕಿಶೋರ ಪಾಟಲ್, ಪಂ ಪಾಪತಿ ಶಾಸ್ತ್ರಿ,ಚಂದ್ರಶೇಖರ ಪಾಟೀಲ್

ಮೂರನೇಯ ಪುಟಕ್ಕೆ

ವಾರ್ಡ್ ನಂ. 22ರ ಮನೆ-ಮನೆಗೆ ಭೇಟಿ: ನಿವಾಸಿಗಳ ಸಮಸ್ಯೆ ಆಲಿಸಿದ ರಾಮನಗೌಡ ಏಗನೂರು

ರಾಯಚೂರು: ಕಳೆದ ಬಾರಿ ವಾರ್ಡ್ ನಂ. 23ಕ್ಕೆ ಭೇಟಿ ನೀಡಿ, ರಾಜಕಾಲುವೆ ಸಮಸ್ಯೆ ವಿಚಾರವಾಗಿ ಧ್ವನಿ ಎತ್ತಿ ರಾಜಕಾಲುವೆಯ ತ್ಯಾಜ್ಯ ವಿಲೇವಾರಿಗೆ ಕಾರಣರಾಗಿದ್ದ ಜೆಡಿಎಸ್ ಮುಖಂಡ ರಾಮನಗೌಡ ಏಗನೂರು, ಇಂದು ವಾರ್ಡ್ ನಂ. 22ರ ಮನೆ-ಮನೆಗೆ ಭೇಟಿ ನೀಡಿ ನಿವಾಸಿಗಳ ಸಮಸ್ಯೆಗಳನ್ನು ಆಲಿಸಿದರು.

ಇಂದು ಬೆಳಿಗ್ಗೆ ಮನೆ-ಮನೆಗೆ ಭೇಟಿ ನೀಡಿದ ರಾಮನಗೌಡ ಏಗನೂರು, ನಿವಾಸಿಗಳ ಸಮಸ್ಯೆಗಳನ್ನು ಕೇಳಿ, ವಾರ್ಡ್ ನಂ. 22ರಲ್ಲಿ ರಾಜಕಾಲುವೆಯಿಂದ ಉಂಟಾಗುತ್ತಿರುವ ಅನಾಹುತಗಳ ಕುರಿತು ಮಾಹಿತಿ ಪಡೆದರು.

ಈ ವೇಳೆ ನಿವಾಸಿಗಳು,



''ಚರಂಡಿ ಕ್ಲೀನ್ ಮಾಡಿ ಎರಡು ತಿಂಗಳುಗಳಾಗಿವೆ. ಕುಡಿಯುವ ನೀರು ನಿಗದಿತ ಸಮಯಕ್ಕೆ ಬರುತ್ತಿಲ್ಲ. ರಸ್ತೆ ಮಾಡುತ್ತೇವೆ ಎಂದು ರಸ್ತೆ ತೋಡಿ ಹೋದವರು ಮರಳಿ ಬಂದಿಲ್ಲ'' ಎಂದು ಸಮಸ್ಯೆಗಳ ಪಟ್ಟಿಯನ್ನು ನೀಡಿದರು.

ನಂತರ ಮಾತನಾಡಿದ ರಾಮನಗೌಡ ಏಗನೂರು, 15 ವರ್ಷಗಳಿಂದ ಅಧಿಕಾರ ನಡೆಸುತ್ತಿರುವ ಶಾಸಕ ಶಿವರಾಜ ಪಾಟೀಲ್ ಹಾಗೂ ಮೂರು ವರ್ಷಗಳಿಂದ ಸಚಿವ ಸ್ಥಾನ ಅನುಭವಿಸಿರುವ ಎನ್.ಎಸ್. ಬೋಸರಾಜು ಅವರ ಪುತ್ರ ರವಿ ಬೋಸರಾಜು ಅವರು ಜನರಿಗೆ ಮೋಸ ಮಾಡಿ ಹಣ ಲೂಟಿ ಮಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಈ ಸಂದರ್ಭದಲ್ಲಿ ಸಂಘಟನೆಯ ವರಲಕ್ಷ್ಮಿ ಸೇರಿದಂತೆ ನಿವಾಸಿಗಳು ಉಪಸ್ಥಿತರಿದ್ದರು

ಗಣೇಶ ಹಬ್ಬದ ಹಿನ್ನೆಲೆಯಲ್ಲಿ ಹಟ್ಟಿ ಪಟ್ಟಣದಲ್ಲಿ ಪೊಲೀಸ್ ರೂಟ್ ಮಾರ್ಚ್

ಹಟ್ಟಿ ಚಿನ್ನದ ಗಣಿ:

ಮಾನ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಚ ಗಿರಿ ಹಾಗು ಡಿವೈಎಸ್ ಪಿ ದತ್ತಾತ್ರೆ ಕಾರ್ನಾಡ್ ಲಿಂಗಸಗೂರು ಉಪ ವಿಭಾಗ ಇವರ ಮಾರ್ಗದರ್ಶನದಲ್ಲಿ ಇಂದು ಹಟ್ಟಿ ಪಟ್ಟಣದಲ್ಲಿ ಗಣೇಶ ಹಬ್ಬದ ಹಿನ್ನೆಲೆಯಲ್ಲಿ ಹಟ್ಟಿ ಪಟ್ಟಣದಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಹಟ್ಟಿ ಪೊಲೀಸ್ ಠಾಣೆಯ ಸಿಪಿಐ ಶಿವಾನಂದ ಗಾಣಿಗೇರ್ ಅವರ ನೇತೃತ್ವದಲ್ಲಿ ಭಾನುವಾರ ರೂಟ್ ಮಾರ್ಚ್ ನಡೆಸಲಾಯಿತು.

ಹಟ್ಟಿ ಪಟ್ಟಣದ ಪಾಮನಕಲ್ಲೂರು ಕ್ರಾಸ್‌ನಿಂದ ಆರಂಭಗೊಂಡ ರೂಟ್ ಮಾರ್ಚ್,ಪಟ್ಟಣದ ಪ್ರಮುಖ ರಸ್ತೆಗಳ ಮೂಲಕ ಸಂಚರಿಸಿ ಹಟ್ಟಿ ಪೊಲೀಸ್ ಠಾಣೆವರೆಗೆ



ನಡೆಯಿತು. ಪೊಲೀಸ್ ಸಿಬ್ಬಂದಿ ಸಮವಸ್ತ್ರದಲ್ಲಿ ಶಿಸ್ತುಬದ್ಧವಾಗಿ ಹೆಜ್ಜೆ ಹಾಕುವ ಮೂಲಕ ಪಟ್ಟಣದ ಪ್ರಮುಖ ಪ್ರದೇಶಗಳಲ್ಲಿ ಸಂಚರಿಸಿದರು.

ಗಣೇಶ ಹಬ್ಬದ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸುವುದು, ಸಾರ್ವಜನಿಕರಲ್ಲಿ ಸುರಕ್ಷತೆಯ ಭಾವನೆ ಮೂಡಿಸುವುದು ಹಾಗೂ ಕಾನೂನು ಸುವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಕಾಪಾಡುವುದು ರೂಟ್ ಮಾರ್ಚ್‌ನ ಪ್ರಮುಖ ಉದ್ದೇಶವಾಗಿತ್ತು.

ಈ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಸಾರ್ವಜನಿಕರಿಗೆ ಗಣೇಶ ಹಬ್ಬವನ್ನು ಶಾಂತಿಯುತವಾಗಿ ಹಾಗೂ ಸೌಹಾರ್ದಯುತವಾಗಿ ಆಚರಿಸುವಂತೆ ಮನವಿ ಮಾಡಿದರು. ಸಾರ್ವಜನಿಕರು ಯಾವುದೇ ವದಂತಿಗಳಿಗೆ ಕಿವಿಗೊಡದೆ, ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸರೊಂದಿಗೆ ಸಹಕರಿಸುವಂತೆ ಸೂಚಿಸಲಾಯಿತು.


ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ನಡೆದ ರೂಟ್ ಮಾರ್ಚ್‌ನಿಂದ ಸಾರ್ವಜನಿಕರಲ್ಲಿ ಪೊಲೀಸ್ ಇಲಾಖೆಯ ಮೇಲಿನ ವಿಶ್ವಾಸ ಮತ್ತಷ್ಟು ಬಲಗೊಂಡಿತು.ಗಣೇಶ ಹಬ್ಬದ ಸಂದರ್ಭದಲ್ಲಿ ಶಾಂತಿ ಮತ್ತು ಸೌಹಾರ್ದತೆ ಕಾಪಾಡಲು ಪೊಲೀಸ್ ಇಲಾಖೆ ಕೈಗೊಂಡ ಮುನ್ನೆಚ್ಚರಿಕಾ ಕ್ರಮಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದರು.

ಜಾಲಹಳ್ಳಿಯಲ್ಲಿ 19 ಕ್ಕೆ ಜಿಲ್ಲಾ ಮಟ್ಟದ ಶೈಕ್ಷಣಿಕ ಸಮಾವೇಶ ಹಾಗೂ ಉತ್ತಮ ಶಿಕ್ಷಕರಿಗೆ ಪ್ರಶಸ್ತಿ ಸಮಾರಂಭ : ನಾಗರಾಜ ಮಸ್ಕಿ

ಜಾಲಹಳ್ಳಿ: ಜಿಲ್ಲೆಯ ವಿವಿಧ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದಿಂದ ರಾಯಚೂರು ಜಿಲ್ಲಾ ಶೈಕ್ಷಣಿಕ ಸಮಾವೇಶ ಮತ್ತು 2026 ರ ಉತ್ತಮ ಶಿಕ್ಷಕ ಪ್ರಶಸ್ತಿ ಸಮಾರಂಭವನ್ನು ಜಾಲಹಳ್ಳಿ ಜಗದರಾದ್ಯ ಜಯಶಾಂತೇಶ್ವರ ಸಭಾ ಭವನದಲ್ಲಿ ಆಯೋಜನೆ ಮಾಡಲಾಗಿದೆ ಎಂದು ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಕಾರ್ಯದರ್ಶಿ ನಾಗರಾಜ ಮಸ್ಕಿ ಹೇಳಿದರು.

ಅವರು ಇಂದು ಬೆಳಗ್ಗೆ ವಿದ್ಯಾಧರೆ ಇಂಗ್ಲಿಷ್ ಮಾಂಟಸಿರಿ ಪ್ರಾಥಮಿಕ ಶಾಲೆಯಲ್ಲಿ ಸುದ್ದಿಗೋಷ್ಠಿ ನೆಡಸಿ ಕಾರ್ಯಕ್ರಮದ ವಿವರಣೆ ಕುರಿತು ಹೇಳಿದರು.

ಇದೇ ತಿಂಗಳ 19 ರಂದು



ಶನಿವಾರ ಬೆಳಗ್ಗೆ ಜಯಶಾಂತೇಶ್ವರ ಸಭಾ ಭವನದಲ್ಲಿ ರಾಯಚೂರು ಜಿಲ್ಲೆಯ ವಿವಿಧ ಖಾಸಗಿ ಶಾಲೆಗಳ ಒಕ್ಕೂಟದಿಂದ ಬಹಳ ಅದ್ದೂರಿಯಾಗಿ ಶೈಕ್ಷಣಿಕ ಸಮಾವೇಶ ಮಾಡುವುದರ ಮುಖಾಂತರ 2026 ರ ಶಾಲಿನ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರತಿ ತಾಲೂಕಗಳಿಂದ15 ಜನ ಪ್ರಾಥಮಿಕ, ಪ್ರೌಢಶಾಲೆ, ಪಿಯುಸಿ, ಮತ್ತು ಪದವಿ ಕಾಲೇಜುಗಳ ಶಿಕ್ಷಕ ಮತ್ತು ಉಪನ್ಯಾಸಕರಿಗೆ ಪ್ರಶಸ್ತಿ ಕೊಡುವುದು ಜೊತೆಗೆ ವಿಶೇಷವಾಗಿ ಜಿಲ್ಲೆಯಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ಕೊಡುವ ಪ್ರಕ್ರಿಯೆ ಕುರಿತು ಸಮಾವೇಶದಲ್ಲಿ ಸಂವಾದ ಮಾಡಲಾಗುವುದು ಅಲ್ಲದೆ ಎನ್ ಇಪಿ / ಎಸ್ ಇಪಿ ಕುರಿತು ಮುಂಬರುವ ದಿನಗಳಲ್ಲಿ ಶಿಕ್ಷಕರು ಮಕ್ಕಳಿಗೆ ಯಾವರೀತಿ ಶೈಕ್ಷಣಿಕ ಪ್ರಗತಿ ಸಾಧಿಸಬೇಕು ಎನ್ನುವ ವಿಷಯಗಳ ಮೇಲೆ ಚರ್ಚೆ ಮಾಡಲಾಗುವುದು ಎಂದು ವಿವರಿಸಿದರು.

ಈ ಕಾರ್ಯಕ್ರಮದ ಸಾನಿದ್ಯವನ್ನು ಜಯಶಾಂತೇಶ್ವರ ಮಠದ ಪೂಜ್ಯರು ವಹಿಸುವರು. ಜಿಲ್ಲೆಯ ಎಲಾ ಶಾಸಕರು ಸಂಸದರು

ಮೂರನೇಯ ಪುಟಕ್ಕೆ

ಚಿತ್ತಾಪುರದಲ್ಲಿ ಶಾಂತಿಯುತ, ಸೌಹಾರ್ದಯುತ ಗಣೇಶೋತ್ಸವ ಆಚರಿಸಿ : ಡಿವೈಎಸ್ಪಿ ಶಂಕರಗೌಡ ಪಾಟೀಲ್



ಚಿತ್ತಾಪುರ,ಸೆ.13-

ಪ್ರತಿವರ್ಷದಂತೆ ಈ ವರ್ಷವೂ ಗಣೇಶ ಹಬ್ಬವನ್ನು ಶಾಂತಿಯುತವಾಗಿ, ಸಡಗರ-ಸಂಭ್ರಮ ಹಾಗೂ ವಿಜೃಂಭಣೆಯಿಂದ ಆಚರಿಸಬೇಕು ಎಂದು ಡಿವೈಎಸ್ಪಿ ಶಂಕರಗೌಡ ಪಾಟೀಲ್ ಕರೆ ನೀಡಿದರು.

ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿ ಗಣೇಶ ಚತುರ್ಥಿ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಚಿತ್ತಾಪುರದಲ್ಲಿ ಎಲ್ಲ ಜಾತಿ-ಧರ್ಮದ ಜನರು ಒಗ್ಗಟ್ಟಿನಿಂದ ಹಬ್ಬಗಳನ್ನು ಆಚರಿಸುವ ಪರಂಪರೆ ಇದೆ. ಕಳೆದ 12 ವರ್ಷಗಳಿಂದ ಇಲ್ಲಿ ಸೇವೆ ಸಲ್ಲಿಸುತ್ತಿದ್ದು, ಯಾವುದೇ ಅಹಿತಕರ ಘಟನೆ ಕಂಡಿಲ್ಲ. ಅದಕ್ಕಾಗಿಯೇ ಚಿತ್ತಾಪುರ ಶಾಂತಿ ಪ್ರಿಯ ತಾಲೂಕು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಹೇಳಿದರು. ಗಣೇಶ ಮಂಡಳಿಗಳು ಕನಿಷ್ಠ ಐದು ಸ್ವಯಂಸೇವಕರನ್ನು ನೇಮಿಸಬೇಕು. ಸುರಕ್ಷತೆಗೆ ಆದ್ಯತೆ ನೀಡಬೇಕು. ಗಣೇಶ ಭಾವಚಿತ್ರವಿರುವ ಬ್ಯಾನರ್‌ಗಳಲ್ಲಿ ಸಭ್ಯತೆ ಕಾಪಾಡಬೇಕು ಹಾಗೂ ಪರಿಸರ ಸ್ನೇಹಿ ಗಣಪತಿ ಪ್ರತಿಷ್ಠಾಪನೆ ಮಾಡಬೇಕು ಎಂದು ಸಲಹೆ ನೀಡಿದರು.

ಪ್ರತಿಷ್ಠಾಪನೆ ಮಾಡುವ ಸ್ಥಳ, ದಿನಗಳ ಸಂಖ್ಯೆ ಹಾಗೂ ವಿಸರ್ಜನೆ ಮೆರವಣಿಗೆಯ ಮಾರ್ಗದ ಸಂಪೂರ್ಣ ಮಾಹಿತಿಯನ್ನು ಮುಂಚಿತವಾಗಿ ಪೊಲೀಸ್ ಇಲಾಖೆಗೆ ನೀಡಿದರೆ ಅಗತ್ಯ ಪೊಲೀಸ್ ಬಂದೋಬಸ್ತ್ ಕಲ್ಪಿಸಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಪಿಎಸ್‌ಐ ಮಂಜುನಾಥ ರೆಡ್ಡಿ ಮಾತನಾಡಿ, ಗಣೇಶ ಪ್ರತಿಷ್ಠಾಪನೆಗೆ ಪೊಲೀಸ್ ಇಲಾಖೆಯಿಂದ ಕಡ್ಡಾಯವಾಗಿ ಅನುಮತಿ ಪಡೆಯಬೇಕು. ರಸ್ತೆ ಬದಿಯಲ್ಲಿ ದೊಡ್ಡ ಪೆಂಡಾಲ್‌ಗಳನ್ನು ನಿರ್ಮಿಸಬಾರದು. ಈ ಬಾರಿಯೂ ದೊಡ್ಡ ಮಟ್ಟದ ಡಿಜೆಗಳಿಗೆ ಅವಕಾಶ ಇಲ್ಲ. ಟ್ರ್ಯಾಕ್ಟರ್ ಲಾರಿ ಅಥವಾ ಟೆಂಪೋಗಳಲ್ಲಿ ಭಾರಿ ಡಿಜೆಗಳನ್ನು ಬಳಸುವುದನ್ನು ನಿಷೇಧಿಸಲಾಗಿದೆ. ಸಣ್ಣ ಮಟ್ಟದ ಧ್ವನಿ ವ್ಯವಸ್ಥೆ ಬಳಸಿಕೊಂಡು ಶಾಂತಿಯುತವಾಗಿ ಹಬ್ಬ ಆಚರಿಸಬೇಕು ಎಂದು ಮನವಿ ಮಾಡಿದರು. ಪುರಸಭೆ ಮಾಜಿ ಅಧ್ಯಕ್ಷ ನಾಗರಾಜ ಭಂಕಲಗಿ ಮಾತನಾಡಿ, ಗಣೇಶ ವಿಸರ್ಜನೆ ವೇಳೆ ಒಂದು ಟಾಪ್ ಹಾಗೂ ಒಂದು ಬೇಸ್ ಡಿಜೆ ಬಳಸಲು ಪೊಲೀಸ್ ಇಲಾಖೆ ಅವಕಾಶ ಕಲ್ಪಿಸಬೇಕು ಎಂದು ಮನವಿ ಮಾಡಿದರು. ಮುಖಂಡ ಜಗದೀಶ ಚವ್ಹಾಣ ಮಾತನಾಡಿ, ಚಿತ್ತಾಪುರದಲ್ಲಿ ಎಲ್ಲ ಸಮಾಜದವರು ಒಗ್ಗಟ್ಟಿನಿಂದ ಹಬ್ಬಗಳನ್ನು ಆಚರಿಸುತ್ತಿದ್ದು, ಯಾವುದೇ ಅಹಿತಕರ ಘಟನೆಗೆ ಅವಕಾಶ ನೀಡುವುದಿಲ್ಲ ಎಂದು ಭರವಸೆ ನೀಡಿದರು.

ತಹಶೀಲ್ದಾರ್ ನಾಗಯ್ಯ ಹಿರೇಮಠ, ಪುರಸಭೆ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಕಾಳಗಿ, ಹಣಮಂತ ಸಂಕನೂರ, ಬಾಬು ಕಾಶಿ, ಅಂಬರೀಶ್ ಸುಲೇಗಾಂವ ಮಾತನಾಡಿದರು.

ಈ ಸಂದರ್ಭದಲ್ಲಿ ಅಗ್ನಿ ಶಾಮಕ ದಳದ ಸಿಪಿಐ ನಾಗರಾಜ, ಎಂ.ಎ ರಶೀದ್, ಖಾಸೀಂ ಎ.ಟು.ಜಡ್, ಸಾಬಣ್ಣ ಕಾಶಿ, ಕೋಟೇಶ್ವರ ರೇಶ್ಮಿ, ನಾಗರಾಜ ರೇಶ್ಮಿ, ಆನಂದ ಯರಗಲ್, ದೇವು ಯಾಬಾಳ, ಲಕ್ಷ್ಮೀಕಾಂತ ತಾಂಡೂರಕರ್, ಸಚೀನ್, ಅಲ್ತಾಫ್, ಸೂರಜ್ ಸೇರಿದಂತೆ ಹಲವು ಮುಖಂಡರು ಸಭೆಯಲ್ಲಿ ಉಪಸ್ಥಿತರಿದ್ದರು. ಮಹೇಶ ರೂಮಾಲ್ ನಿರೂಪಿಸಿ, ವಂದಿಸಿದರು.

ಗಣೇಶ ವಿಸರ್ಜನೆ ಸ್ಥಳ ಬದಲಾವಣೆ :

ಡಿವೈಎಸ್ಪಿ ಶಂಕರಗೌಡ ಪಾಟೀಲ್ ಮಾಹಿತಿ ನೀಡಿ, ಪ್ರತಿವರ್ಷ ದೇಶಮುಖ ಅವರ ಬಾವಿಯಲ್ಲಿ ಗಣೇಶ ವಿಸರ್ಜನೆ ಮಾಡಲಾಗುತ್ತಿತ್ತು. ಆದರೆ ಆ ಬಾವಿ ಸಂಪೂರ್ಣ ಮುಚ್ಚಿರುವುದರಿಂದ ಈ ಬಾರಿ ಮಳಖೇಡ್ ರಸ್ತೆಯಲ್ಲಿರುವ ಸೇಂದಿ ಡಿಪೋ ಬಾವಿಯಲ್ಲಿ ವಿಸರ್ಜನೆ ನಡೆಸಲು ಯೋಜಿಸಲಾಗಿದೆ. ಇದರಿಂದ ವಿಸರ್ಜನೆ ಮೆರವಣಿಗೆಯ ಮಾರ್ಗದಲ್ಲಿ ಸ್ವಲ್ಪ ಬದಲಾವಣೆ ಆಗಲಿದೆ ಎಂದು ತಿಳಿಸಿದರು.

ಯಡ್ರಾಮಿ ಗಣೇಶೋತ್ಸವವನ್ನು ಶಾಂತಿ, ಸೌಹಾರ್ದತೆಯಿಂದ ಆಚರಿಸಿ: ಪಿಎಸ್‌ಐ ತಿಮ್ಮಯ್ಯ



ಯಡ್ರಾಮಿ,ಸೆ.13-

ಗಣೇಶೋತ್ಸವವನ್ನು ಶಾಂತಿ, ಸೌಹಾರ್ದತೆ ಹಾಗೂ ಭಕ್ತಿಭಾವದಿಂದ ಆಚರಿಸಬೇಕು. ಮೆರವಣಿಗೆಯಲ್ಲಿ ನಿಗದಿತ ಮಾರ್ಗ ಮತ್ತು ಸಮಯವನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಜೊತೆಗೆ ಧ್ವನಿವರ್ಧಕ ಬಳಕೆಗೆ ಸಂಬಂಧಿಸಿದ ನಿಯಮಗಳನ್ನು ಅನುಸರಿಸಬೇಕು ಎಂದು ಯಡ್ರಾಮಿ ಪೊಲೀಸ್ ಠಾಣೆಯ ಪಿಎಸ್‌ಐ ತಿಮ್ಮಯ್ಯ ಹೇಳಿದರು.

ಗಣೇಶೋತ್ಸವ ಹಿನ್ನೆಲೆಯಲ್ಲಿ ಪೊಲೀಸ್ ಠಾಣೆ ಆವರಣದಲ್ಲಿ ನಡೆದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರಚೋದನಕಾರಿ ಘೋಷಣೆಗಳು, ಗಲಾಟೆಗಳು ಹಾಗೂ ಯಾವುದೇ ಕಾನೂನುಬಾಹಿರ ಚಟುವಟಿಕೆಗಳಿಗೆ ಅವಕಾಶ ನೀಡಬಾರದು ಎಂದು ಗಣೇಶೋತ್ಸವ ಸಮಿತಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆ, ಮೆರವಣಿಗೆ ಮತ್ತು ವಿಸರ್ಜನೆ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಸಮಿತಿ ಮುಖಂಡರು ಹಾಗೂ ಸಾರ್ವಜನಿಕರೊಂದಿಗೆ ಪೊಲೀಸರು ಚರ್ಚೆ ನಡೆಸಿದರು.

ಗಣೇಶೋತ್ಸವವನ್ನು ಶಾಂತಿಯುತವಾಗಿ ಮತ್ತು ಸೌಹಾರ್ದತೆಯಿಂದ ಆಚರಿಸಲು ಸಾರ್ವಜನಿಕರು ಹಾಗೂ ಗಣೇಶೋತ್ಸವ ಸಮಿತಿಗಳು ಪೊಲೀಸ್ ಇಲಾಖೆಯೊಂದಿಗೆ ಸಂಪೂರ್ಣ ಸಹಕಾರ ನೀಡುವಂತೆ ಪಿಎಸ್‌ಐ ತಿಮ್ಮಯ್ಯ ಮನವಿ ಮಾಡಿದರು.

ಈ ವೇಳೆ ಗೊಳ್ಳಾಲಪ್ಪಗೌಡ ಮಾಗಣಗೇರ, ರಾಜುಗೌಡ ಮಾಲಿಪಾಟೀಲ್, ಮಲ್ಲನಗೌಡ ಪಾಟೀಲ ಸಂಬಡ, ಭಾಗ್ಯವಂತ ಪವರ್ ಗೊಳಲಪ್ಪ ಗೆಜ್ಜೆ, ಮಲ್ಲು ಕುಸ್ತಿ, ದಳಪತಿಗೌಡ ಸೈದಾಪುರ, ಶಫಿವುಲ್ಲಾ ದಖನಿ ಸೇರಿದಂತೆ ಪೊಲೀಸ್ ಸಿಬ್ಬಂದಿ, ಗಣೇಶೋತ್ಸವ ಸಮಿತಿ ಮುಖಂಡರು ಹಾಗೂ ವಿವಿಧ ಸಮುದಾಯಗಳ ಮುಖಂಡರು ಇತರಿದ್ದರು.

ಕಲಬುರಗಿಯಲ್ಲಿ ವಿಶೇಷ ಕಾರ್ಯಾಚರಣೆ: 10 ಬಾಲ ಕಾರ್ಮಿಕರ ರಕ್ಷಣೆ



ಕಲಬುರಗಿ,ಸೆ.13-

ಕಾರ್ಮಿಕ ಆಯುಕ್ತರು ಹಾಗೂ ಪೊಲೀಸ್ ಇಲಾಖೆಯ ನಿರ್ದೇಶನದ ಮೇರೆಗೆ ಬಾಲ ಮತ್ತು ಕಿಶೋರ ಕಾರ್ಮಿಕರ ಪತ್ತೆ ಹಾಗೂ ರಕ್ಷಣೆಗಾಗಿ ಕಲಬುರಗಿ ಜಿಲ್ಲೆಯಾದ್ಯಂತ ಏಕಕಾಲದಲ್ಲಿ ವಿಶೇಷ ತಪಾಸಣಾ ಕಾರ್ಯಾಚರಣೆ ನಡೆಸಲಾಯಿತು.

ಜಿಲ್ಲೆಯ 11 ತಾಲೂಕುಗಳಲ್ಲಿ ಕಾರ್ಮಿಕ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಸಹಾಯವಾಣಿ, ಡಾನ್ ಬಾಸ್ಕೋ, ಮಾರ್ಗದರ್ಶಿ ಸಂಸ್ಥೆ ಹಾಗೂ ಪೊಲೀಸ್ ಇಲಾಖೆ ಜಂಟಿಯಾಗಿ ನಡೆಸಿದ ಕಾರ್ಯಾಚರಣೆಯಲ್ಲಿ ವಿವಿಧ ವಾಣಿಜ್ಯ ಸ್ಥಳಗಳಲ್ಲಿ ಕೆಲಸ ಮಾಡುತ್ತಿದ್ದ 10 ಬಾಲ ಮತ್ತು ಕಿಶೋರ ಕಾರ್ಮಿಕರನ್ನು ರಕ್ಷಿಸಲಾಯಿತು.

ಹೋಟೆಲ್, ಗ್ಯಾರೇಜ್, ಚಿಕನ್ ಸೆಂಟರ್ ಸೇರಿದಂತೆ ವಿವಿಧ ವಾಣಿಜ್ಯ ಸಂಸ್ಥೆಗಳಲ್ಲಿ ತಪಾಸಣೆ ನಡೆಸಿ ಮಕ್ಕಳನ್ನು ರಕ್ಷಿಸಿದ ಅಧಿಕಾರಿಗಳು, ಬಳಿಕ ಅವರನ್ನು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸಿದರು. ತಾತ್ಕಾಲಿಕವಾಗಿ ಬಾಲಕರ ಬಾಲಮಂದಿರದಲ್ಲಿ ಪುನರ್ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ.

ರಕ್ಷಿಸಲಾದ ಮಕ್ಕಳ ವಯಸ್ಸು ಹಾಗೂ ಇತರ ಅಗತ್ಯ ದಾಖಲೆಗಳ ಪರಿಶೀಲನೆ ನಡೆಯುತ್ತಿದ್ದು, ಮಕ್ಕಳನ್ನು ಕಾನೂನುಬಾಹಿರವಾಗಿ ಕೆಲಸಕ್ಕೆ ನೇಮಿಸಿಕೊಂಡಿರುವುದು ದೃಢಪಟ್ಟರೆ ಸಂಬಂಧಪಟ್ಟ ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಡಕಿಯಲ್ಲಿ ಪ್ರಜಾಸೇವೆ ಕಾರ್ಯಕ್ರಮಕ್ಕೆ ಉತ್ತಮ ಸ್ಪಂದನೆ



ಸೇಡಂ,ಸೆ.13-

ಸರ್ಕಾರದ ಜನಪರ ಯೋಜನೆಗಳು ಹಾಗೂ ಆಡಳಿತವನ್ನು ಜನರ ಮನೆಬಾಗಿಲಿಗೆ ತಲುಪಿಸುವ ಉದ್ದೇಶದಿಂದ ಸೇಡಂ ತಾಲೂಕಿನ ಆಡಕಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಪ್ರಜಾಸೇವೆ ಕಾರ್ಯಕ್ರಮಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಯಿತು.

ಆಡಕಿ ಗ್ರಾಮ ಪಂಚಾಯಿತಿ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ತಹಸೀಲ್ದಾರ್ ಶ್ರೀಯಾಂಕ ಧನಶ್ರೀ, ಸಾರ್ವಜನಿಕರಿಂದ ಸ್ವೀಕರಿಸುವ ಪ್ರತಿಯೊಂದು ಅಹವಾಲನ್ನು ಗಂಭೀರವಾಗಿ ಪರಿಗಣಿಸಿ ಸಾಧ್ಯವಾದಷ್ಟು ಬೇಗ ವಿಲೇವಾರಿ ಮಾಡಲಾಗುವುದು ಎಂದು ಭರವಸೆ ನೀಡಿದರು.

ಸಾರ್ವಜನಿಕರು ಸಲ್ಲಿಸುವ ವಿವಿಧ ಇಲಾಖೆಗಳ ಕುಂದುಕೊರತೆ ಹಾಗೂ ಮನವಿ ಪತ್ರಗಳನ್ನು ಪರಿಶೀಲಿಸಿ, ಸ್ಥಳದಲ್ಲೇ ಪರಿಹರಿಸಬಹುದಾದ ಸಮಸ್ಯೆಗಳನ್ನು ತಕ್ಷಣ ಇತ್ಯರ್ಥಪಡಿಸಲಾಗುವುದು. ಸ್ಥಳ ಪರಿಶೀಲನೆ ಅಥವಾ ವರದಿ ಅಗತ್ಯವಿರುವ ಅರ್ಜಿಗಳನ್ನು ಆದ್ಯತೆಯ ಮೇರೆಗೆ ಶೀಘ್ರವಾಗಿ ವಿಲೇವಾರಿ ಮಾಡಲಾಗುವುದು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಆರೋಗ್ಯ, ಆಹಾರ ಮತ್ತು ನಾಗರಿಕ ಸರಬರಾಜು, ಕೃಷಿ ಸೇರಿದಂತೆ ವಿವಿಧ ಇಲಾಖೆಗಳ ಮಾಹಿತಿ ಮಳಿಗೆಗಳನ್ನು ತೆರೆಯಲಾಗಿತ್ತು. ಗ್ರಾಮಸ್ಥರು ಸರ್ಕಾರದ ವಿವಿಧ ಯೋಜನೆಗಳು ಮತ್ತು ಸೌಲಭ್ಯಗಳ ಕುರಿತು ಮಾಹಿತಿ ಪಡೆದುಕೊಂಡರು.


ಕೆರೆ-ಕಾಲುವೆ ಹೂಳೆತ್ತುವುದು, ಆಸ್ಪತ್ರೆ ನಿರ್ಮಾಣ, ನರೇಗಾ ಯೋಜನೆಯಡಿ ಉದ್ಯೋಗ, ಕುಡಿಯುವ ನೀರು, ಒಳಚರಂಡಿ ಹಾಗೂ ಸ್ವಚ್ಛತೆ ಸೇರಿದಂತೆ ವಿವಿಧ ಸಮಸ್ಯೆಗಳಿಗೆ ಸಂಬಂಧಿಸಿದಂತೆ 40ಕ್ಕೂ ಹೆಚ್ಚು ಅರ್ಜಿಗಳನ್ನು ಗ್ರಾಮಸ್ಥರು ಸಲ್ಲಿಸಿದರು.

ಜೆಜೆಎಂ ಕಾಮಗಾರಿ ಸರಿಪಡಿಸಲು ಒತ್ತಾಯ : ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಮುಕ್ರಂಖಾನ್ ಮಾತನಾಡಿ, ಪ್ರಜಾಸೇವೆ ಕಾರ್ಯಕ್ರಮದ ಕುರಿತು ಹೋಬಳಿ ವ್ಯಾಪ್ತಿಯ ಎಲ್ಲ ಗ್ರಾಮಗಳಿಗೂ ವ್ಯಾಪಕ ಪ್ರಚಾರ ನೀಡಬೇಕಿತ್ತು ಎಂದರು. ಜಲ ಜೀವನ್ ಮಿಷನ್ (ಜೆಜೆಎಂ) ಕಾಮಗಾರಿಯಿಂದ ಹಲವು ರಸ್ತೆಗಳು ಹಾಳಾಗಿದ್ದು, ಸಮರ್ಪಕ ಕುಡಿಯುವ ನೀರು ಪೂರೈಕೆಯಾಗುತ್ತಿಲ್ಲ ಎಂದು ಆರೋಪಿಸಿ, ಹಾಳಾದ ರಸ್ತೆಗಳನ್ನು ದುರಸ್ತಿಪಡಿಸುವಂತೆ ಒತ್ತಾಯಿಸಿದರು.

ಇದಕ್ಕೆ ಸ್ಪಂದಿಸಿದ ತಹಸೀಲ್ದಾರ್ ಶ್ರೀಯಾಂಕ ಧನಶ್ರೀ, ಜೆಜೆಎಂ ಕಾಮಗಾರಿಯಿಂದ ಉಂಟಾಗಿರುವ ಸಮಸ್ಯೆಗಳನ್ನು ಮುಂದಿನ ಎರಡು ವಾರಗಳೊಳಗೆ ಬಗೆಹರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಕಾರ್ಯಕ್ರಮದಲ್ಲಿ ತಾಲೂಕು ಪಂಚಾಯಿತಿ ಇಒ ಸೈಯದ್ ಪಟೇಲ್, ಕ್ಷೇತ್ರ ಶಿಕ್ಷಣಾಧಿಕಾರಿ ಮಾರುತಿ ಹುಜರಾತಿ, ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆಯ ಎಇಇ ವಿಶ್ವನಾಥ್, ಭೂ ದಾಖಲೆಗಳ ಸಹಾಯಕ ನಿರ್ದೇಶಕಿ ವಿಜಯಲಕ್ಷ್ಮೀ ಪಾಟೀಲ, ಸಿಡಿಪಿಒ ಅನುರಾಧ ಪಾಟೀಲ, ಸಮಾಜ ಕಲ್ಯಾಣ ಇಲಾಖೆಯ ಡಾ. ಶೃತಿ, ಅಬಕಾರಿ ಇಲಾಖೆಯ ಓಂಪ್ರಕಾಶ್ ಮಠಪತಿ ಸೇರಿದಂತೆ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದು, ಸಾರ್ವಜನಿಕರ ಅಹವಾಲುಗಳನ್ನು ಆಲಿಸಿದರು.

ಶಿಕ್ಷಕರು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಶಿಲ್ಪಿಗಳು: ಡಾ.ನೀಲಾಂಬಿಕಾ ಶೇರಿಕಾರ



ಕಲಬುರಗಿ,ಸೆ.13-

ಶಿಕ್ಷಕ ಎಂದರೆ ಕೇವಲ ಪಾಠ ಹೇಳುವ ಗುರುವಲ್ಲ, ವಿದ್ಯಾರ್ಥಿಯ ಭವಿಷ್ಯವನ್ನು ರೂಪಿಸುವ ಶಿಲ್ಪಿ ಎಂದು ಶರಣಬಸವೇಶ್ವರ ದೇವಸ್ಥಾನ ಆವರಣದ ಶಾಲಾ-ಕಾಲೇಜುಗಳ ನಿರ್ದೇಶಕಿ ಡಾ.ನೀಲಾಂಬಿಕಾ ಶೇರಿಕಾರ ಹೇಳಿದರು.

ನಗರದ ಗೋದುತಾಯಿ ಶಿಕ್ಷಣ (ಬಿ.ಎಡ್.) ಮಹಾವಿದ್ಯಾಲಯದಲ್ಲಿ ಎರಡನೇ ಸೆಮಿಸ್ಟರ್ ವಿದ್ಯಾರ್ಥಿನಿಯರು ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯಗಳು, ಸಂಸ್ಕಾರ, ನೈತಿಕತೆ, ಆತ್ಮವಿಶ್ವಾಸ ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸುವ ಮಹತ್ವದ ಹೊಣೆಗಾರಿಕೆ ಹೊಂದಿದ್ದಾರೆ ಎಂದರು.

ವೇದಕಾಲದ ಶಿಕ್ಷಣ ಪದ್ಧತಿ ಮತ್ತು ಇಂದಿನ ಶಿಕ್ಷಣ ವ್ಯವಸ್ಥೆಯ ನಡುವಿನ ವ್ಯತ್ಯಾಸಗಳನ್ನು ವಿವರಿಸಿದ ಅವರು, ಕಾಲ ಬದಲಾದರೂ ಶಿಕ್ಷಣದ ಮೂಲ ಉದ್ದೇಶ ವ್ಯಕ್ತಿತ್ವ ನಿರ್ಮಾಣವೇ ಆಗಿದೆ ಎಂದು ಹೇಳಿದರು.

ಡಾ.ಅಪ್ಪ ಅವರು ಶಿಕ್ಷಕರಿಗೆ ಮಹಾನ್ ಮಾರ್ಗದರ್ಶಕರಾಗಿದ್ದು, ಅವರು ತೋರಿದ ದಾರಿಯಲ್ಲಿ ಅನೇಕ ಶಿಕ್ಷಕರು ರೂಪುಗೊಂಡಿದ್ದಾರೆ ಎಂದು ಸ್ಮರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ.ಕಲ್ಪನಾ ಭೀಮಳ್ಳಿ ಮಾತನಾಡಿ,

ಉತ್ತಮ ಶಿಕ್ಷಕ ವಿದ್ಯಾರ್ಥಿಗೆ ಕೇವಲ ಪರೀಕ್ಷೆಯಲ್ಲಿ ಅಂಕ ಗಳಿಸುವುದನ್ನಲ್ಲ, ಜೀವನದ ಸವಾಲುಗಳನ್ನು ಎದುರಿಸುವ ಧೈರ್ಯವನ್ನೂ ಕಲಿಸುತ್ತಾನೆ ಎಂದರು.

ಶರಣಬಸವೇಶ್ವರ ಸಂಸ್ಥಾನ ಅನ್ನದಾಸೋಹದ ಜೊತೆಗೆ ಅಕ್ಷರದಾಸೋಹಕ್ಕೂ ಸಮಾನ ಪ್ರಾಮುಖ್ಯತೆ ನೀಡಿ ಈ ಭಾಗವನ್ನು ಶಿಕ್ಷಣದ ಕೇಂದ್ರವನ್ನಾಗಿ ಬೆಳೆಸುವಲ್ಲಿ ಡಾ.ಅಪ್ಪ ಹಾಗೂ ಡಾ.ಅವ್ವ ಅವರ ಕೊಡುಗೆ ಅಪಾರವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜವೇರಿಯಾ ಅಂಜುಮಶೇಖ್ ನಿರೂಪಣೆ ಮತ್ತು ವಂದನೆ ಸಲ್ಲಿಸಿದರು. ಪ್ರಿಯಾಂಕಾ ಸ್ವಾಗತಿಸಿದರು. ಮಹಾವಿದ್ಯಾಲಯದ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಸರ್ಕಾರಿ ಬಾಲಮಂದಿರಗಳಿಗೆ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಭೇಟಿ : ಪರಿಶೀಲನೆ



ಬೀದರ್,ಸೆ.13-

ನಗರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಕ್ಕಳ ರಕ್ಷಣಾ ನಿರ್ದೇಶನಾಲಯ ವ್ಯಾಪ್ತಿಯ ಸರ್ಕಾರಿ ಬಾಲಕರ ಬಾಲಮಂದಿರ ಹಾಗೂ ಸರ್ಕಾರಿ ಬಾಲಕಿಯರ ಬಾಲಮಂದಿರಕ್ಕೆ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಶುಕ್ರವಾರ ಸಂಜೆ ಭೇಟಿ ನೀಡಿ ಮಕ್ಕಳ ವಸತಿ ವ್ಯವಸ್ಥೆ, ನೈರ್ಮಲ್ಯ ಮತ್ತು ಮೂಲಸೌಕರ್ಯಗಳನ್ನು ಪರಿಶೀಲಿಸಿದರು.

ಬಾಲಮಂದಿರಗಳ ನಿರ್ವಹಣೆ ಹಾಗೂ ಮಕ್ಕಳಿಗೆ ಕಲ್ಪಿಸಿರುವ ಆಹಾರ ಸೌಲಭ್ಯಗಳನ್ನು

ವೀಕ್ಷಿಸಿದ ಜಿಲ್ಲಾಧಿಕಾರಿಗಳು, ವ್ಯವಸ್ಥೆ ತೃಪ್ತಿಕರವಾಗಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು. ಬಳಿಕ ಮಕ್ಕಳೊಂದಿಗೆ ಆತ್ಮೀಯವಾಗಿ ಸಂವಾದ ನಡೆಸಿ ಅವರ ಶಿಕ್ಷಣ, ಆರೋಗ್ಯ ಮತ್ತು ಕ್ಷೇಮಾಭಿವೃದ್ಧಿ ಕುರಿತು ಮಾಹಿತಿ ಪಡೆದರು.

ಮಕ್ಕಳನ್ನು ಉದ್ದೇಶಿಸಿ ಮಾತನಾಡಿದ ಅವರು, ಪ್ರತಿಯೊಬ್ಬರೂ ಶ್ರದ್ಧೆಯಿಂದ ವ್ಯಾಸಂಗ ಮಾಡಿ ಉನ್ನತ ಭವಿಷ್ಯ

ರೂಪಿಸಿಕೊಳ್ಳಬೇಕು. ಶಿಕ್ಷಣವೇ ಜೀವನದ ಪ್ರಗತಿಗೆ ಭದ್ರ ಅಡಿಪಾಯವಾಗಿದ್ದು, ಓದಿನ ಕಡೆಗೆ ಹೆಚ್ಚಿನ ಗಮನ ಹರಿಸುವಂತೆ ಸಲಹೆ ನೀಡಿದರು. ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಸುರೇಖಾ, ಸಹಾಯಕ ಆಯುಕ್ತ ಅಭಿನವ್ ಜೈನ್, ಮಕ್ಕಳ ರಕ್ಷಣಾಧಿಕಾರಿ ಶಾರದಾ ಕಲ್ಮಲಕರ್ ಸೇರಿದಂತೆ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಚಿತ್ತಾಪುರ ಕೋಲಿ ಸಮಾಜದ ಮುಖಂಡರಿಗೆ ನಿಗಮ-ಮಂಡಳಿ ಸ್ಥಾನ ನೀಡುವಂತೆ ಪ್ರಿಯಾಂಕ್ ಖರ್ಗೆಗೆ ಮನವಿ



ಚಿತ್ತಾಪುರ,ಸೆ.13-

ಕೋಲಿ ಸಮಾಜದ ಹಾಗೂ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರಾದ ಹಣಮಂತ ಸಂಕನೂರ ಮತ್ತು ರಾಮಲಿಂಗ ಬಾನಾರ್ ಹೊಸ್ಸರ್ ಅವರನ್ನು ಸರ್ಕಾರದ ಯಾವುದಾದರೂ ನಿಗಮ ಅಥವಾ ಮಂಡಳಿಗೆ ನಾಮನಿರ್ದೇಶನ ಮಾಡಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ಹಾಗೂ ಕೋಲಿ ಸಮಾಜದ ಮುಖಂಡರು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಮನವಿ ಸಲ್ಲಿಸಿದರು. ಸಲ್ಲಿಸಿದ ಮನವಿಯಲ್ಲಿ, ಹಣಮಂತ ಸಂಕನೂರ ಮತ್ತು ರಾಮಲಿಂಗ ಬಾನಾರ್ ಹೊಸ್ಸರ್ ಅವರು ಹಲವು ವರ್ಷಗಳಿಂದ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ ಪಕ್ಷ ಸಂಘಟನೆಗಾಗಿ ಸೇವೆ ಸಲ್ಲಿಸುತ್ತಿದ್ದು, ಪಕ್ಷದ ತತ್ವ, ಸಿದ್ಧಾಂತ ಮತ್ತು ನೀತಿಗಳಿಗೆ ಬದ್ಧರಾಗಿ ಕಾರ್ಯನಿರ್ವಹಿಸಿದ್ದಾರೆ ಎಂದು ಉಲ್ಲೇಖಿಸಲಾಗಿದೆ.

ವಿಧಾನಸಭೆ, ಲೋಕಸಭೆ, ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಚಿತ್ತಾಪುರ ಕ್ಷೇತ್ರದ ವ್ಯಾಪ್ತಿಯಲ್ಲಿ ಕೋಲಿ ಸಮಾಜದ ಮತಗಳನ್ನು ಕಾಂಗ್ರೆಸ್ ಪರವಾಗಿ ಒಗ್ಗೂಡಿಸುವಲ್ಲಿ ಇಬ್ಬರೂ ಪ್ರಮುಖ ಪಾತ್ರ ವಹಿಸಿದ್ದು, ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಿದ್ದಾರೆ ಎಂದು ಮನವಿಯಲ್ಲಿ ತಿಳಿಸಲಾಗಿದೆ. ಅವರ ದೀರ್ಘಕಾಲದ ಪಕ್ಷನಿಷ್ಠೆ ಹಾಗೂ ಸಂಘಟನಾ ಸೇವೆಯನ್ನು ಪರಿಗಣಿಸಿ ರಾಜ್ಯ ಸರ್ಕಾರ ಸೂಕ್ತ ನಿಗಮ ಅಥವಾ ಮಂಡಳಿಯಲ್ಲಿ ಜವಾಬ್ದಾರಿ ನೀಡುವಂತೆ ಮನವಿಯಲ್ಲಿ ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ ಕೋಲಿ ಸಮಾಜದ ತಾಲೂಕು ಅಧ್ಯಕ್ಷ ನಿಂಗಣ್ಣ ಹೆಗಲೇರಿ, ಶರಣಪ್ಪ ನಾಶಿ, ಬಸವರಾಜ ಚಿನ್ನಮಳ್ಳಿ, ಪೃಥ್ವಿರಾಜ್ ನಾಮದಾರ, ಮುನಿಯಪ್ಪ ಕೊಳ್ಳಿ, ಮಲ್ಲಿಕಾರ್ಜುನ ಅಲ್ಲೂರ ಮಾಲಗತ್ತಿ, ಕರಣಕುಮಾರ್ ಅಲ್ಲೂರ, ಮಲ್ಲಿಕಾರ್ಜುನ ಸಂಗಾವಿ, ಪ್ರಭು ಹಲಕರ್ಟಿ, ಬಸವರಾಜ ಜಕಾತಿ, ಶರಣಪ್ಪ ಹಿಟ್ಟಿನ್, ಮಲ್ಲಿಕಾರ್ಜುನ ಹೊನ್ನಪೂರ ಸೇರಿದಂತೆ ಇತರರು ಇದ್ದರು.

ವಿದ್ಯಾರ್ಥಿಗಳು ಏಕಾಗ್ರತೆ, ಪರಿಶ್ರಮದಿಂದ ಸಾಧನೆ ಮಾಡಬೇಕು: ಡಾ.ವಿಜಯಲಕ್ಷ್ಮೀ ಬಾಳೇಕುಂದ್ರಿ



ಕಲಬುರಗಿ,ಸೆ.13-

ಇಂದಿನ ವಿದ್ಯಾರ್ಥಿಗಳೇ ನಾಳಿನ ದೇಶದ ಭವಿಷ್ಯದ ನಿರ್ಮಾಪಕರು. ತಮ್ಮಲ್ಲಿರುವ ಪ್ರತಿಭೆಯನ್ನು ಹೊರತರುವ ನಿಟ್ಟಿನಲ್ಲಿ ಸತತ ಪ್ರಯತ್ನ ಮತ್ತು ಏಕಾಗ್ರತೆಯಿಂದ ಕಾರ್ಯನಿರ್ವಹಿಸಿದರೆ ಭವಿಷ್ಯದಲ್ಲಿ ವಿಶೇಷ ಸಾಧನೆ ಮಾಡಲು ಸಾಧ್ಯ ಎಂದು ಖ್ಯಾತ ಮಕ್ಕಳ ಹೃದಯರೋಗ ತಜ್ಞೆ ಡಾ. ವಿಜಯಲಕ್ಷ್ಮೀ ಬಾಳೇಕುಂದ್ರಿ ಹೇಳಿದರು.

ನಗರದ ಎಕೆಆರ್ ದೇವಿ ವಿಜ್ಞಾನ ಪದವಿಪೂರ್ವ ಕಾಲೇಜಿನಲ್ಲಿ ಶನಿವಾರ ನಡೆದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಹಾಗೂ ಸಾಂಸ್ಕೃತಿಕ ಉತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ಮಾತನಾಡಿ, ಶಿಕ್ಷಣವು ಅಜ್ಞಾನದ ಅಂಧಕಾರವನ್ನು ದೂರ ಮಾಡಿ ಜ್ಞಾನದ ಬೆಳಕಿನತ್ತ ಕೊಂಡೊಯ್ಯುವ ಮಾರ್ಗವಾಗಿದೆ. ವಿದ್ಯಾರ್ಥಿಗಳಿಗೆ ಸಂಸ್ಕಾರಯುತ ಶಿಕ್ಷಣ ನೀಡುತ್ತಿರುವುದು ಸಂತಸದ ಸಂಗತಿ ಎಂದು ಹೇಳಿದರು.

ಸಂಶೋಧಕ ಹಾಗೂ ಸಾಹಿತಿ ಮುಡುಬಿ ಗುಂಡೇರಾವ ಸಹ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಆಡಳಿತಾಧಿಕಾರಿ ವಿದ್ಯಾಸಾಗರ ದೇಶಮುಖ, ವಿದ್ಯಾರ್ಥಿಗಳಲ್ಲಿ ಉತ್ತಮ ಸಂಸ್ಕಾರ ಮತ್ತು ವ್ಯಕ್ತಿತ್ವ ಬೆಳೆಸುವ ಜವಾಬ್ದಾರಿ ಶಿಕ್ಷಣ ಸಂಸ್ಥೆಗಳ ಜೊತೆಗೆ ಪೋಷಕರ ಮೇಲೂ ಇದೆ ಎಂದು ಹೇಳಿದರು. ಮಕ್ಕಳು ಟಿವಿ ಮತ್ತು ಮೊಬೈಲ್ ಬಳಕೆಯಿಂದ ದೂರವಿದ್ದು, ಓದು ಹಾಗೂ ವ್ಯಕ್ತಿತ್ವ ವಿಕಸನದತ್ತ ಹೆಚ್ಚಿನ ಗಮನ ಹರಿಸುವಂತೆ ಪೋಷಕರು ಮಾರ್ಗದರ್ಶನ ನೀಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ವಚನಪ್ರಿಯ ಜಗದೀಶ ಮರಪಳ್ಳಿ, ಕಾಲೇಜಿನ ವ್ಯವಸ್ಥಾಪಕ ಎಂ.ವಿ.ಎಸ್. ಸುಬ್ರಹ್ಮಣ್ಯಂ, ಕಿರಣ ಗೋಡಬಾಲೆ, ಶಿವರಾಜ ಪಾಟೀಲ, ಪರಮಾನಂದ ಸರಸಂಬಿ, ರಾಜೇಂದ್ರ ಮಾಡಬೂಳ, ಡಾ. ಮಲ್ಲಿಕಾರ್ಜುನ ವಡ್ಡನಕೇರಿ, ಬಸವರಾಜ ಮೊರಬದ, ಪ್ರೊ. ಎಸ್.ಎಲ್. ಪಾಟೀಲ, ಧರ್ಮರಾಜ ಜವಳಿ ಸೇರಿದಂತೆ ಕಾಲೇಜಿನ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ನೀರಿನ ಸಮಸ್ಯೆ ಪ್ರತಿಭಟನೆಯಲ್ಲಿ ಕಾಂಗ್ರೆಸ್-ಜೆಡಿಎಸ್ ಮುಖಂಡರ ಮಾತಿನ ಚಕಮಕಿ

ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದರು. ನಂತರ ಮಾತನಾಡಿದ ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಸೋಮನಗೌಡ ಬಾದರ್ಲಿ, ರೈತರ ಸಮಸ್ಯೆಯಲ್ಲಿ ರಾಜಕೀಯ ಮಾಡುವುದು ಸರಿಯಲ್ಲ. ಎಲ್ಲರೂ ಒಗ್ಗಟ್ಟಾಗಿ ರೈತರಿಗೆ ನೀರು ಒದಗಿಸುವ ಕೆಲಸ ಮಾಡಬೇಕು ಎಂದು ಹೇಳಿದರು.

ಮನುಷ್ಯಗೆ ಅಧ್ಯಾತ್ಮಿಕ ಚಿಂತನೆ ನಡೆಸಿ

,ಸಂತ ಶಿಶುನಾಳ ಶರೀ ಫರ ಪುರಾಣ ಪ್ರವಚನಕಾರ ವೆ ಮೂ ಸಿದ್ದರಾಮಯ್ಯ ಶಾಸ್ತ್ರಿಗಳು ಸೋಮನಾಳ ಹಿರೇಮಠ ಪುರಾ ಣ ಪ್ರವಚನ ಭಕ್ತಿ ಸೇವೆ ವೆ ಮೂ ಹುಚ್ಚಯ್ಯ ಗವಾಯಿಗಳು ತಬಲ ರಾಘವೇಂದ್ರ ಆಶಾಪೂರು ರೇಣು ಕು ಸ್ವಾಮಿ ವೀರೇಶ್ ಆಲ್ಕೋಡ್ ಕೇಶವಮೂರ್ತಿ ಸೇರಿದಂತೆ ಇತರರು ಪಾಲ್ಗೊಂಡಿದ್ದರು .

ಜಾಲಹಳ್ಳಿಯಲ್ಲಿ 19 ಕ್ಕೆ ಜಿಲ್ಲಾ ಮಟ್ಟದ ಶೈಕ್ಷಣಿಕ ಸಮಾವೇಶ ಹಾಗೂ ಉತ್ತಮ ಶಿಕ್ಷಕರಿಗೆ ಪ್ರಶಸ್ತಿ ಸಮಾರಂಭ : ನಾಗರಾಜ ಮಸ್ಕಿ

ಮತ್ತು ವಿಧಾನ ಪರಿಷತ್ ಸದಸ್ಯರು ಭಾಗವಹಿಸುವರು. ಸ್ಥಳೀಯ ಶಾಸಕಕರಾದ ಕರಿಯಮ್ಮ ನಾಯಕನವರ ಅಧ್ಯಕ್ಷತೆಯಲ್ಲಿ ಸಮಾವೇಶ ಜರುಗುವುದು ಎಂದು ಹೇಳಿದರು. ಆದ್ದರಿಂದ ಜಿಲ್ಲೆಯ ಎಲ್ಲಾ ಖಾಸಗಿ ಶಾಲಾಶಿಕ್ಷಣ ಸಂಸ್ಥೆಯವರು ಭಾಗವಹಿಸಲು ಮನವಿ ಮಾಡಿದರ.

ಸುದ್ದಿಗೋಷ್ಠಿಯಲ್ಲಿ ದೇವದುರ್ಗ ತಾಲೂಕು ಖಾಸಗಿ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ಶಂಕರಲಿಂಗಯ್ಯ ಸ್ವಾಮಿ, ಹಿರಿಯ ಪತ್ರಕರ್ತ ಮಲ್ಲಿಕಾರ್ಜುನ ದೇಸಾಯಿ, ಉಪಾಧ್ಯಕ್ಷ ಮಾರೆಪ್ಪ ಕೊತ್ತದೊಡ್ಡಿ, ಮಲ್ಲಪ್ಪ ಕುಂಬಾರ, ಮಂಜುನಾಥ ತೋರಣ ದಿನ್ನಿ, ಮೈಬೂಬ ಕಂದಗಲ್, ಚನ್ನಪ್ಪ ಬೂದಿನಾಳ, ಡಾ.ವಿಜಯರೆಡ್ಡಿ, ಬಸವರಾಜ ಕೊಪ್ಪರ ಉಪಸ್ಥಿತರಿದ್ದರು.

ಹೋರಾಟ ಮಾಡುವವರಿಗೆ ಪಕ್ಷದಲ್ಲಿ ಸ್ಥಾನ ಸಿಗುತ್ತದೆ : ಡಿ.ಕೆ.ಶಿವಕುಮಾರ

ಇಳಿಸಿ ಬಿಡುತ್ತೇನೆ, ದಿಲ್ಲಿಯಿಂದ ಬಾಂಬ್ ಹಾಕಿ ಬಿಡುತ್ತೇನೆ, ಅಲ್ಲೋ ಲ ಕಲ್ಲೋಲ ಮಾಡಿ ಬಿಡುತ್ತೇನೆ ಅಂತ ಮಾತಾಡುತ್ತಿದ್ದಾರೆ. ಅವರ ಕುಟುಂಬದಲ್ಲಿ ಅದೇನೋ ಅಲ್ಲೋ ಲ ಕಲ್ಲೋಲ ಆಗಿದೆಯಲ್ಲ. ಅದನ್ನು ನಾನು ಬಿಡಿಸಿ ಹೇಳಬೇಕೆ? ದಿನವೂ ನಾವು ಟಿವಿಯಲ್ಲಿ ನೋಡುತ್ತಿದ್ದೇ ವಲ್ಲ ಎಂದು ತಿರುಗೇಟು ನೀಡಿದರು.

ಅವರು ನಮ್ಮನ್ನು ಏನು ಬೇಕಾದರೂ ಮಾಡಲಿ. ನಮ್ಮನ್ನು ಬೇಕಾದರೆ ಸೀಳಿ ಈ.ಡಿ., ಸಿಬಿಐಗೆ ತೆಗೆದುಕೊಂಡು ಹೋಗಲಿ, ಯಾವ ತನಿಖೆ ಬೇಕಾದರೂ ಮಾಡಲಿ. ಈ ಸ್ಥಾನದಲ್ಲಿದ್ದುಕೊಂಡು ದ್ವೇಷ ಬೇಡ ಎಂದು ಆ ವಿಚಾರಗಳಿಗೆ ನಾನು ಹೋಗಿಲ್ಲ. ಯಾರಿಗೂ ತೊಂದರೆ ಆಗಬಾರದು ಎಂಬುದು ನನ್ನ ಆಶಯ. ಈ ಅಧಿಕಾರ ಸಕಾರಾ ತ್ಮಕವಾಗಿ ಉಪಯೋಗವಾಗ ಬೇಕು. ಈ ಅಧಿಕಾರ ಇರುವುದು ದುರುಪಯೋಗ ಮಾಡಲು ಅಲ್ಲ. ಹತ್ತು ಜನಕ್ಕೆ ಒಳ್ಳೆಯದನ್ನು ಮಾಡಲು ಎಂಬುದು ನನ್ನ ಬದ್ಧತೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ಬಿಜೆಪಿಯವರು 10 ದಿನ ಸದನ ನಡೆಸಲೂ ಬಿಡಲಿಲ್ಲ. ಆನಂತರವೂ ಪಾದಯಾತ್ರೆ ಮಾಡಿದರು. ಈಗ ಕರೆದಿರುವ ಅಧಿವೇಶನದಲ್ಲಿ ಬೇರೆ ವಿಚಾರ ಮಾತನಾಡುವಂತಿಲ್ಲ. ಕೇವಲ ರೈತರ ವಿಚಾರ ಮಾತ್ರ. ಕಸ್ತೂರಿ ರಂಗನ್ ವರದಿ ಜಾರಿಗೆ ತಂದವರು ಯಾರು? ಇದರ ಬಗ್ಗೆ ಚರ್ಚೆ ಮಾಡಲಿ, ಬಿಡಲಿ. ಅದು ಅವರಿಗೆ ಬಿಟ್ಟದ್ದು. ಆನಂತರ ಅವರು ಗದೆಯಾದರೂ ಬೀಸಲಿ, ಬಾಣವನ್ನಾದರೂ ಬಿಡಲಿ. ಇದನ್ನು ಅನುಭವಿಸಲು ನಮ್ಮ ಪಕ್ಷ, ನಾವು ಹಾಗೂ ಕಾರ್ಯಕರ್ತರು ಸಿದ್ಧರಿದ್ದೇವೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ಕಾಂಗ್ರೆಸ್ ಪಕ್ಷಕ್ಕೆ ಇನ್ನಷ್ಟು ಜನ ಸೇರ್ಪಡೆಯಾಗಲು ಕಾಯುತ್ತಿದ್ದಾರೆ. ಪಕ್ಷದ ಕಾರ್ಯಕರ್ತರೇ ಕಾಂಗ್ರೆಸ್‌ನ ಆಧಾರ ಸ್ತಂಭ. ವಿಧಾನಸಭೆಯಲ್ಲಿ ಸಿದ್ದರಾಮಯ್ಯ ಮತ್ತು ತಾವು ಒಂದೇ ಗುಂಪು, ಕಾಂಗ್ರೆಸ್‌ನಲ್ಲಿ ಒಗ್ಗಟ್ಟಾಗಿದ್ದೇವೆ ಎಂದು ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದರು.

ಈಗಾಗಲೇ ಪಂಚಾಯತ್ ಮಟ್ಟದಲ್ಲಿ ಗ್ಯಾರಂಟಿ ಸಮಿತಿಗಳನ್ನು ರಚಿಸಲಾಗುತ್ತಿದೆ. ಸುಮಾರು 70 ಸಾವಿರ ಗ್ಯಾರಂಟಿ ಸಮಿತಿ ಸದಸ್ಯರಿಗೆ ವಿಧಾನಸೌಧಕ್ಕೆ ಬರುವ ಅವಕಾಶ ಕಲ್ಪಿಸಲಾಗಿದೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ಕಾರ್ಯಕ್ರಮದಲ್ಲಿ ಸಚಿವ ರಾಮಲಿಂಗಾರೆಡ್ಡಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ, ಮಾಜಿ ಸಚಿವೆ ರಾಣಿ ಸತೀಶ್, ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ ರಮೇಶ್ ಬಾಬು, ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷ ಹನುಮಂತರಾಯಪ್ಪ, ಮಾಜಿ ಮೇಯರ್ ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್ ಪಕ್ಷಕ್ಕೆ ಮರಳಿ ಬಂದಿರುವುದು ನನ್ನ ಜೀವನದ ದೊಡ್ಡ ತಿರುವು ಎಂದು ಭಾವಿಸುತ್ತೇನೆ. ಹಿಂದೆ ನಾನು ಕಾಂಗ್ರೆಸ್‌ನಲ್ಲಿ ಎರಡು ಬಾರಿ ಶಾಸಕನಾಗಲು ಪ್ರಮುಖ ಕಾರಣವೇ ಡಿ.ಕೆ.ಶಿವಕುಮಾರ್. ಹಿಂದೆ ನನಗೆ ಕಾಂಗ್ರೆಸ್ ಎಲ್ಲ ರೀತಿಯ ಅವಕಾಶಗಳನ್ನು ಮಾಡಿಕೊಟ್ಟದ್ದರಿಂದಲೇ ಕಾರ್ಪೊರೇಟರ್ ಆಗಿ, ನಂತರ ಶಾಸಕನೂ ಆಗಿದ್ದೆ. ಇದರ ನಡುವೆ ನನಗೆ ಗೊತ್ತೋ, ಗೊತ್ತಿಲ್ಲದೆಯೋ ದುಡುಕಿನ ನಿರ್ಧಾರ ತೆಗೆದುಕೊಂಡು ಬಿಜೆಪಿ ಹೋಗಿ ತಪ್ಪು ಹೆಜ್ಜೆಯನ್ನು ಇಟ್ಟಿದ್ದೆ. ಈಗ ಪಶ್ಚಾತ್ತಾಪಕ್ಕೆ ಒಳಗಾಗಿ ಅಲ್ಲಿಂದ ಹೊರಬಂದಿದ್ದೇನೆ. ಯಾವುದೇ ಷರತ್ತುಗಳಿಲ್ಲದೆ ಕಾಂಗ್ರೆಸ್‌ಗೆ ಸೇರ್ಪಡೆಗೊಂಡಿದ್ದೇನೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 150 ಸ್ಥಾನಗಳನ್ನು ಗೆಲ್ಲಲು ಟೊಂಕಕಟ್ಟಿ ನಿಂತಿರುವ ಡಿ.ಕೆ.ಶಿವಕುಮಾರ್ ಅವರ ಕನಸನ್ನು ನನಸು ಮಾಡಲು ನಾನು ಮತ್ತು ನಮ್ಮ ಕಾರ್ಯಕರ್ತರು ಕೈಜೋಡಿಸುತ್ತೇವೆ. ಪಕ್ಷದಲ್ಲಿ ಪ್ರಾಮಾಣಿಕವಾಗಿ, ನಿಷ್ಠೆಯಿಂದ ಕೆಲಸ ಮಾಡುತ್ತೇನೆ ಎಂದು ಮಾಜಿ ಶಾಸಕ ನೆ.ಲ.ನರೇಂದ್ರ ಬಾಬು ತಿಳಿಸಿದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ನೀರಿನ ಸಮಸ್ಯೆ ಪ್ರತಿಭಟನೆಯಲ್ಲಿ ಕಾಂಗ್ರೆಸ್-ಜೆಡಿಎಸ್ ಮುಖಂಡರ ಮಾತಿನ ಚಕಮಕಿ



ಸಿಂಧನೂರು ತಾಲ್ಲೂಕಿನ ಬೂದಿಹಾಳ ಕ್ಯಾಂಪಿನಲ್ಲಿ ಕೆಳಭಾಗದ ರೈತರಿಗೆ ನೀರಿನ ಸಮಸ್ಯೆ ಪರಿಹರಿಸುವಂತೆ ಆಗ್ರಹಿಸಿ ನಡೆದ ರೈತರ ಪ್ರತಿಭಟನೆಯಲ್ಲಿ ರಾಜಕೀಯ ಭಾಷಣದ ವಿಚಾರವಾಗಿ ಕಾಂಗ್ರೆಸ್ ಹಾಗೂ ಜೆಡಿಎಸ್ ಮುಖಂಡರ ನಡುವೆ ಮಾತಿನ ಚಕಮಕಿ ನಡೆಯಿತು. ಪರಿಣಾಮ ಕೆಲಕಾಲ ಸ್ಥಳದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು.

ಪ್ರತಿಭಟನೆಯಲ್ಲಿ ಮಾತನಾಡಿದ ಜೆಡಿಎಸ್ ಯುವ ಮುಖಂಡ ಅಭಿಷೇಕ ನಾಡಗೌಡ, ಮೇಲ್ಭಾಗದ ರೈತರು ಹೆಚ್ಚಿನ ಪ್ರಮಾಣದಲ್ಲಿ ನೀರು ಬಳಸಿಕೊಳ್ಳುತ್ತಿರುವುದರಿಂದ ಸಿಂಧನೂರಿನ ವಿವಿಧ ಕಾಲುವೆಗಳಿಗೆ ಸಮರ್ಪಕವಾಗಿ ನೀರು ತಲುಪುತ್ತಿಲ್ಲ ಎಂದು ಆರೋಪಿಸಿದರು. ರೈತರ ಸಮಸ್ಯೆಗಳನ್ನು ಪರಿಹರಿಸಬೇಕಾದ ಜನಪ್ರತಿನಿಧಿಗಳೇ ರೈತರೊಂದಿಗೆ ಪ್ರತಿಭಟನೆ ನಡೆಸುತ್ತಿರುವುದು ಸರಿಯಲ್ಲ ಎಂದು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಅಲ್ಲದೆ, ಜೋಳ ಬೆಳೆದ ರೈತರಿಗೆ ಇನ್ನೂ ಹಣ ಪಾವತಿಯಾಗಿಲ್ಲ ಏಕೆ ಎಂದು ಪ್ರಶ್ನಿಸಿದರು.

ಈ ವೇಳೆ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ಮುಖಂಡ ವೀರರಾಜು, ಜೋಳದ ಹಣವನ್ನು ಕುಮಾರಸ್ವಾಮಿ ಕೊಡಿಸಬೇಕು ಎಂದು ಹೇಳಿದಾಗ ಅಭಿಷೇಕ ನಾಡಗೌಡ ಆಕ್ಷೇಪ ವ್ಯಕ್ತಪಡಿಸಿದರು. ಇದರಿಂದ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿದ್ದು, ಕೆಲಕಾಲ ಪ್ರತಿಭಟನಾ ಸ್ಥಳದಲ್ಲಿ ಗಲಾಟೆಯ ವಾತಾವರಣ ನಿರ್ಮಾಣವಾಯಿತು.

ಸ್ಥಳಕ್ಕೆ ಆಗಮಿಸಿದ ಗ್ರಾಮೀಣ ಪೊಲೀಸ್ ಠಾಣೆಯ ಪಿಎಸ್‌ಐ ಮೌನೇಶ ರಾಠೋಡ್ ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದರು. ನಂತರ ಮಾತನಾಡಿದ ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಸೋಮನಗೌಡ ಬಾದರ್ಲಿ, ರೈತರ ಸಮಸ್ಯೆಯಲ್ಲಿ ರಾಜಕೀಯ ಮಾಡುವುದು ಸರಿಯಲ್ಲ. ಎಲ್ಲರೂ ಒಗ್ಗಟ್ಟಾಗಿ ರೈತರಿಗೆ ನೀರು ಒದಗಿಸುವ ಕೆಲಸ ಮಾಡಬೇಕು ಎಂದು ಹೇಳಿದರು.

ಹುಲಸೂರ್ ಬರ ಘೋಷಣೆಗೆ ಆಗ್ರಹಿಸಿ ನಾಲ್ಕನೇ ದಿನವೂ ಮುಂದುವರೆದ ರೈತರ ಧರಣಿ



ಹುಲಸೂರ್,ಸೆ.13-

ಹುಲಸೂರ್ ತಾಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸುವುದು, ರೈತರ ಕೃಷಿ ಸಾಲ ಮನ್ನಾ ಮಾಡುವುದು ಹಾಗೂ ಜಾನುವಾರುಗಳಿಗೆ ಮೇವು ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವಂತೆ ಆಗ್ರಹಿಸಿ ವಿವಿಧ ರೈತ ಸಂಘಟನೆಗಳ ನೇತೃತ್ವದಲ್ಲಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿ ಸತ್ಯಾಗ್ರಹ ಶನಿವಾರ ನಾಲ್ಕನೇ ದಿನವೂ ಮುಂದುವರಿಯಿತು.

ತಹಸೀಲ್ದಾರ್ ಕಚೇರಿ ಎದುರು ನಡೆದ ಪ್ರತಿಭಟನೆಯಲ್ಲಿ ರೈತರು ಕಪ್ಪುಪಟ್ಟಿ ಧರಿಸಿ ಆಕ್ರೋಶ ವ್ಯಕ್ತಪಡಿಸಿದರು. ಜಾಮಖಂಡಿ, ತೋಗಲೂರ್, ಹಾಲಹಳ್ಳಿ, ಗಡಿಗೌಡಗಾಂವ್, ದೇವನಾಳ್ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಿಂದ ರೈತರು ಧರಣಿಯಲ್ಲಿ ಭಾಗವಹಿಸಿದರು.


ರೈತ ಮುಖಂಡ ಡಾ. ಶಂಕರ 'ಗೌಡ ಮಾತನಾಡಿ, ತಾಲೂಕಿನ ವಾಸ್ತವ ಪರಿಸ್ಥಿತಿಯನ್ನು ಆಧರಿಸಿ ಮತ್ತೊಮ್ಮೆ ವೈಜ್ಞಾನಿಕ ಬೆಳೆ ಸಮೀಕ್ಷೆ ನಡೆಸಿ ಹುಲಸೂರ್ ತಾಲೂಕನ್ನು ಬರಪೀಡಿತ ಪಟ್ಟಿಗೆ ಸೇರಿಸಬೇಕು. ಸರ್ಕಾರ ಈ ಬೇಡಿಕೆ ಈಡೇರಿಸುವವರೆಗೆ ಧರಣಿ ಕೈಬಿಡುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ರೈತ ಸಂಘದ ತಾಲೂಕು ಕಾರ್ಯದರ್ಶಿ ರಾಜಕುಮಾರ್ ನಿರ್ಡೋದೆ ಮಾತನಾಡಿ, ಸಂಕಷ್ಟದಲ್ಲಿರುವ ರೈತರಿಗೆ ಪರಿಹಾರ ಘೋಷಿಸಬೇಕು. ಕೇವಲ ಸಾಂತ್ವನ ಹೇಳುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಬೇಡಿಕೆ ಈಡೇರುವವರೆಗೆ ಹೋರಾಟ ಮುಂದುವರಿಯಲಿದೆ ಎಂದರು. ಧರಣಿ ವೇಳೆ ರೈತ ರುದ್ರಪ್ಪ ಯರಭಾಗ ಅಸ್ವಸ್ಥರಾಗಿ ಕುಸಿದು ಬಿದ್ದಿದ್ದು, ಅವರನ್ನು ತಕ್ಷಣ ಆಂಬುಲೆನ್ಸ್ ಮೂಲಕ ಹುಲಸೂರ್ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಿ ಚಿಕಿತ್ಸೆ ನೀಡಲಾಯಿತು.

ಸಂಜೆ ಸುಮಾರು ಅರ್ಧ ಗಂಟೆ ಜಿಟಿಜಿಟಿ ಮಳೆ ಸುರಿದರೂ ರೈತರು ಧರಣಿ ಸ್ಥಳ ತೊರೆಯದೆ ಮಳೆಯಲ್ಲೇ ಪ್ರತಿಭಟನೆ ಮುಂದುವರಿಸಿದರು. ಆರಂಭಿಕ ಮಳೆಯ ನಂತರ ಮಳೆ ಕೈಕೊಟ್ಟ ಪರಿಣಾಮ ಮೊದಲ ಹಂತದ ಬೆಳೆ ಹಾನಿಗೊಂಡಿದ್ದು, ಎರಡನೇ ಬಾರಿ ಬಿತ್ತನೆ ಮಾಡಿದ ಬೆಳೆಗಳೂ ತೇವಾಂಶ ಕೊರತೆಯಿಂದ ಒಣಗುತ್ತಿವೆ ಎಂದು ರೈತರು ಅಳಲು ತೋಡಿಕೊಂಡರು.

ಈ ಸಂದರ್ಭದಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ್ ಸ್ವಾಮಿ, ರಾಜ್ಯ ಸಮಿತಿ ಸದಸ್ಯ ವೀರರೆಡ್ಡಿ ಪಾಟೀಲ್, ತಾಲೂಕಾಧ್ಯಕ್ಷ ಬಸವರಾಜ್ ಚೌರೆ, ಖಜಾಂಚಿ ಶಿವಕುಮಾರ್ ಕನ್ನಾಡೆ, ಉಪಾಧ್ಯಕ್ಷ ಸುನೀಲ್ ಭೂಜಂಗೆ, ನವಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯದರ್ಶಿ ನೂರ್ ಅಹ್ಮದ್, ನಾಗನಾಥ್ ತೊಗರಗೆ, ಬಸವರಾಜ್ ಆದೇಪ್ಪ, ಅಶೋಕ್ ಕಾಡಾದಿ, ಅಶೋಕ್ ಗೋಟೆ9, ಮಚೇಂದ್ರ ಗೋಖಲೆ, ಧನರಜ್ ಕಾರಗಿರ್, ವೀರಪ್ಪ ಬಾಲಕುಂದೆ, ಅಪ್ಪರಾವ್ ಖಂಡಾಳೆ, ರಮೇಶ್ ಭೋಪಳೆ, ಜಗನ್ನಾಥ್ ಬಡದಾಳೆ, ನಾಗನಾಥ್ ಬನಸೂಡೆ, ಶಿವರಾಜ್ ಕೌಟೆ, ಸೋಮನಾಥ್ ನಂದಗೆ, ಮಲ್ಲಿಕಾರ್ಜುನ್ ಧಬಾಲೆ ಹಾಗೂ ಭರತ ರಾವ್ ಭೂಸಾರೆ ಸೇರಿದಂತೆ ಅನೇಕ ರೈತರು ಭಾಗವಹಿಸಿದ್ದರು.

ಕಲ್ಯಾಣ ಕರ್ನಾಟಕದಲ್ಲಿ ಪ್ಯಾಸೆಂಜರ್ ರೈಲು ಸೇವೆ ಪುನರಾರಂಭಕ್ಕೆ ಒತ್ತಾಯ



ಕಲಬುರಗಿ,ಸೆ.13-

ಕೋವಿಡ್-19 ಸಂದರ್ಭದಲ್ಲಿ ಸ್ಥಗಿತಗೊಂಡಿರುವ ಪ್ಯಾಸೆಂಜರ್ ರೈಲುಗಳನ್ನು ಕಲ್ಯಾಣ ಕರ್ನಾಟಕ ಭಾಗದಲ್ಲಿ ಪುನರಾರಂಭಿಸಿ, ಗ್ರಾಮೀಣ ಭಾಗದ ಪ್ರಮುಖ ರೈಲು ನಿಲ್ದಾಣಗಳಲ್ಲಿ ನಿಲುಗಡೆ ನೀಡಬೇಕು ಎಂದು ಅಖಿಲ ಕರ್ನಾಟಕ ದಲಿತ ಸೇನೆ ಒತ್ತಾಯಿಸಿದೆ.

ಮುಂಬೈಯಿಂದ ಆಗಮಿಸಿದ್ದ ಸೆಂಟ್ರಲ್ ರೈಲ್ವೆಯ ಜನರಲ್ ಮ್ಯಾನೇಜರ್ ರಾಜೀವ್ ಶ್ರೀವಾಸ್ತವ ಅವರನ್ನು ಗಾಣಗಾಪುರ ರೈಲು ನಿಲ್ದಾಣದಲ್ಲಿ ಅಖಿಲ ಕರ್ನಾಟಕ ದಲಿತ ಸೇನೆಯ ರಾಜ್ಯಾಧ್ಯಕ್ಷ ದತ್ತಾತ್ರೇಯ ಕುಡಕಿ ನೇತೃತ್ವದ ನಿಯೋಗ ಭೇಟಿ ಮಾಡಿ ಮನವಿ ಸಲ್ಲಿಸಿತು.

ನಿಯೋಗದ ಮನವಿಯಲ್ಲಿ, ಸೆಂಟ್ರಲ್ ರೈಲ್ವೆ ಈ ಭಾಗದ ರೈತರು, ಕೂಲಿ ಕಾರ್ಮಿಕರು, ವಿದ್ಯಾರ್ಥಿಗಳು ಮತ್ತು ವ್ಯಾಪಾರಸ್ಥರಿಗೆ ಪ್ರಮುಖ ಸಾರಿಗೆ ವ್ಯವಸ್ಥೆಯಾಗಿದ್ದು, ಕುಲಾಲಿ, ಗೌಡಗಾಂವ, ಹುಣಸಿಹಡಗಿಲ, ಸಾವಳಗಿ, ಬಬಲಾದ, ನಂದೂರ, ಮರತೂರ ಸೇರಿದಂತೆ ಕರ್ನಾಟಕ ಹಾಗೂ ಮಹಾರಾಷ್ಟ್ರದ ಹಲವು ಗ್ರಾಮಗಳ ಜನರಿಗೆ ಪ್ಯಾಸೆಂಜರ್ ರೈಲು ಸೇವೆ ಅತ್ಯಂತ ಅಗತ್ಯವಾಗಿದೆ ಎಂದು ತಿಳಿಸಲಾಗಿದೆ.

ಕೋವಿಡ್‌ಗೂ ಮುನ್ನ ರಾಯಚೂರು, ಸೋಲಾಪುರ, ವಿಜಯಪುರ, ಗುಂತಕಲ್ ಹಾಗೂ ಫಲಕ್ನಾಮ ಮಾರ್ಗಗಳಲ್ಲಿ ಸಂಚರಿಸುತ್ತಿದ್ದ ಪ್ಯಾಸೆಂಜರ್ ರೈಲುಗಳು ಇನ್ನೂ ಪೂರ್ಣ ಪ್ರಮಾಣದಲ್ಲಿ ಪುನರಾರಂಭವಾಗಿಲ್ಲ. ಇದರಿಂದ ಬಡ ಪ್ರಯಾಣಿಕರು ಹೆಚ್ಚುವರಿ ವೆಚ್ಚ ಮತ್ತು ತೊಂದರೆ ಅನುಭವಿಸುತ್ತಿದ್ದಾರೆ ಎಂದು ನಿಯೋಗ ಗಮನ ಸೆಳೆಯಿತು. ಸೋಲಾಪುರ -ಫಲಕ್ನಾಮ, ಫಲಕ್ನಾಮ-ಕಲಬುರಗಿ, ಸೋಲಾ ಪುರ- ಗುಂತಕಲ್, ಕಲಬುರಗಿ- ಸೋಲಾಪುರ ಹಾಗೂ ಹೈದರಾ ಬಾದ್-ಕಲಬುರಗಿ ಮಾರ್ಗಗಳ ಪ್ಯಾಸೆಂಜರ್ ರೈಲುಗಳನ್ನು ಮರು ಪ್ರಾರಂಭಿಸಬೇಕು ಎಂದು ಆಗ್ರಹಿ ಸಲಾಯಿತು.

ಗಾಣಗಾಪುರ ರೈಲು ನಿಲ್ದಾಣದಲ್ಲಿ ಎಲ್‌ಟಿಟಿ- ವಿಶಾಖಪ ಟ್ಟಣ, ಹೈದರಾಬಾದ್-ಪುಣೆ, ಸೋಲಾಪುರ-ಹಾಸನ, ಸಾಯಿನಗರ ಶಿರಡಿ ಹಾಗೂ ಮುಂಬೈ- ಕೋನಾರ್ಕ್ ಎಕ್ಸ್ ಪ್ರೆಸ್ ರೈಲುಗಳಿಗೆ ನಿಲುಗಡೆ ನೀಡುವಂತೆ ಗ್ರಾಮಸ್ಥರ ಪರವಾಗಿ ಮನವಿ ಸಲ್ಲಿಸಲಾಯಿತು.

ಮನವಿಗೆ ಸ್ಪಂದಿಸಿದ ಜನರಲ್ ಮ್ಯಾನೇಜರ್ ರಾಜೀವ್ ಶ್ರೀವಾಸ್ತವ, ಈ ಬೇಡಿಕೆಗಳನ್ನು ಮುಂದಿನ ಸಭೆಯಲ್ಲಿ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಇದೇ ವೇಳೆ, ಮುಂಬೈ-ಬೆಂಗ 'ಳೂರು ನಡುವೆ ಹೊಸ ವಂದೇ ಭಾರತ್ ಎಕ್ಸ್ ಪ್ರೆಸ್ ಹಾಗೂ ಕಲಬುರಗಿಯಿಂದ ದೆಹಲಿಗೆ ಹೊಸ ಸೂಪರ್‌ಫಾಸ್ಟ್ ಎಕ್ಸ್ ಪ್ರೆಸ್ ರೈಲು ಸೇವೆ ಆರಂಭಿಸುವಂತೆ ದತ್ತಾತ್ರೇಯ ಕುಡಕಿ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಡಾ. ಹಣಮಂತರಾವ ಹೊಳಕುಂದಿ, ವೀರಯ್ಯ ಸ್ವಾಮಿ, ದಸ್ತಯ್ಯ ಗುತ್ತೇದಾರ, ಪ್ರಕಾಶ ಹಡಪಾದ, ಶರಣು ನೀಲೂರು, ಶರೀಫ್ ಚೌದರಿ, ಮಹಿಬೂಬ್ ಶೇಖ್, ಮಹಿಬೂಬ್‌ಗೌಸ್, ಮಹೇಶ್ ಗುತ್ತೇದಾರ, ಬಾಬು ಸಿಂಗೆ, ಸಿದ್ದಪ್ಪ ನಾಡಗಿರಿ, ರಮೇಶ್ ನಾಡಗಿರಿ, ಶರಣು ಮೇಲಿನಕೇರಿ, ಕೃಷ್ಣ ಕಾನಳ್ಳಿ, ರಾಜ್ಯ ಗೌರವಾಧ್ಯಕ್ಷ ಆನಂದರಾಯ ಗಾಯಕವಾಡ, ಆಳಂದ ತಾಲೂಕಾಧ್ಯಕ್ಷ ಭೋಜರಾಜ ಜುಭ್ರೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಜೇವರ್ಗಿ ಹಾಲಗಡ್ಲಾ ಕೆರೆಗೆ ನೀರು ಹರಿಸಲು ಆಗ್ರಹಿಸಿ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ

ಜೇವರ್ಗಿ,ಸೆ.13-

ಬರಗಾಲದಿಂದ ತಾಲೂಕಿನ ಹಾಲಗಡ್ಲಾ ಕೆರೆ ಬತ್ತುವ ಹಂತ ತಲುಪಿರುವ ಹಿನ್ನೆಲೆಯಲ್ಲಿ ಕೆರೆಗೆ ಕೂಡಲೇ ನೀರು ತುಂಬಿಸುವಂತೆ ಆಗ್ರಹಿಸಿ ಗ್ರಾಮಸ್ಥರು ಹಾಗೂ ಹೋರಾಟಗಾರರು ಶನಿವಾರದಿಂದ ಪಟ್ಟಣದ ಮಿನಿ ವಿಧಾನಸೌಧ ಆವರಣದಲ್ಲಿ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಆರಂಭಿಸಿದ್ದಾರೆ.

ಬೆಳಿಗ್ಗೆ 10 ಗಂಟೆಯಿಂದ ಆರಂಭವಾದ ಸತ್ಯಾಗ್ರಹದಲ್ಲಿ ಪಾಲ್ಗೊಂಡ ಪ್ರತಿಭಟನಾಕಾರರು, ಕೆರೆಗೆ ನೀರು ಹರಿಸುವಲ್ಲಿ ವಿಳಂಬ ಮಾಡುತ್ತಿರುವ ಕೆಬಿಜೆಎನ್‌ಎಲ್ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕಿನಲ್ಲಿ ಬರದ ಪರಿಸ್ಥಿತಿ ತೀವ್ರವಾಗಿದ್ದು, ಹಾಲಗಡ್ಲಾ ಕೆರೆ ಸಂಪೂರ್ಣ ಬತ್ತುವ ಸ್ಥಿತಿ ನಿರ್ಮಾಣವಾಗಿದೆ. ಕಾಲುವೆಗಳಲ್ಲಿ ನೀರು ಇಲ್ಲದ ಕಾರಣ ರೈತರು ಬೆಳೆದಿರುವ ಬೆಳೆಗಳು ಒಣಗುತ್ತಿದ್ದು, ಹಲವು ಬಾರಿ ಮನವಿ ಸಲ್ಲಿಸಿದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎಂದು ಹೋರಾಟಗಾರರು ಆರೋಪಿಸಿದರು. ಕನಿಷ್ಠ ಪ್ರಮಾಣದಲ್ಲಾದರೂ ನೀರು ಹರಿಸಿ ಬೆಳೆಗಳನ್ನು ಉಳಿಸಿಕೊಳ್ಳಲು ಅವಕಾಶ ಕಲ್ಪಿಸಬೇಕು. ಬರಗಾಲದಿಂದ ಜಾನುವಾರುಗಳಿಗೂ ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದು, ಹಾಲಗಡ್ಲಾ ಕೆರೆಗೆ ನೀರು ತುಂಬಿಸಿದರೆ ಅಂತರ್ಜಲ ಮಟ್ಟವೂ ಸುಧಾರಿಸಿ ಸುತ್ತಮುತ್ತಲಿನ ಗ್ರಾಮಗಳ ಕುಡಿಯುವ ನೀರಿನ ಸಮಸ್ಯೆ ನಿವಾರಣೆಯಾಗಲಿದೆ ಎಂದು ಹೇಳಿದರು.

ಸಂಬಂಧಪಟ್ಟ ಅಧಿಕಾರಿಗಳು ಕೆರೆಗೆ ನೀರು ಹರಿಸುವವರೆಗೆ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹವನ್ನು ಹಿಂಪಡೆಯುವುದಿಲ್ಲ ಎಂದು ಹೋರಾಟಗಾರರು ಎಚ್ಚರಿಕೆ ನೀಡಿದರು. ತಾಲೂಕಿನ ಶಾಸಕ ಹಾಗೂ ಸಣ್ಣ ನೀರಾವರಿ ಸಚಿವ ಡಾ. ಅಜಯ್ ಧರ್ಮಸಿಂಗ್ ಅವರು ತಮ್ಮ ಕ್ಷೇತ್ರದಲ್ಲಿನ ನೀರಿನ ಸಮಸ್ಯೆ ಪರಿಹರಿಸಲು ತುರ್ತು ಕ್ರಮ ಕೈಗೊಂಡು ಹಾಲಗಡ್ಲಾ ಕೆರೆಗೆ ನೀರು ತುಂಬಿಸಬೇಕು ಎಂದು ಆಗ್ರಹಿಸಿದರು. ಬೇಡಿಕೆ ಈಡೇರಿಸದಿದ್ದರೆ ಮುಂದಿನ ದಿನಗಳಲ್ಲಿ ಶಾಸಕರ ಕಚೇರಿಗೆ ಮುತ್ತಿಗೆ ಹಾಕಿ ಉಗ್ರ ಪ್ರತಿಭಟನೆ ನಡೆಸುವುದಾಗಿ ಹೋರಾಟಗಾರರು ಎಚ್ಚರಿಸಿದರು. ಸತ್ಯಾಗ್ರಹದಲ್ಲಿ ಬಸವರಾಜ ಹಾಲಗಡ್ಲಾ, ಸಂತೋಷ ಪಾಟೀಲ, ಸಕ್ರಪ್ಪಗೌಡ ಹರನೂರು, ಪರ್ವತ್ತರೆಡ್ಡಿ ಪಾಟೀಲ, ಆದರ್ಶ ಹರನೂರು, ನಾಗರಾಜ ಕುಂಬಾರ, ಸುಭಾಷ ಕವಲ್ದಾರ್ ಶರಣಪ್ಪ ಠಣಕೇದಾರ, ರಮೇಶ್ ಬಡಿಗೇರ್ ಹಣಮಂತ ಐನಾಪೂರ, ಸಂಗಪ್ಪ ಹಾಲಗಡ್ಲಾ, ಸಾಬಣ್ಣ ಕಾಡಮಗೇರಿ, ಶಿವರಾಜ, ನಿಂಗಪ್ಪ ಪೂಜಾರಿ, ಸಕ್ಕಪ್ಪ ಹರನೂರು, ತಿಮ್ಮಯ್ಯ ಹರನೂರು, ಸೋಮಣ್ಣಗೌಡ ಮಾಲೀಪಾಟೀಲ, ನಾನಾಗೌಡ ಮಾಲೀಪಾಟೀಲ, ಶಶಿಕಾಂತ ಕವಲ್ದಾರ್ ಸೇರಿದಂತೆ ಗ್ರಾಮಸ್ಥರು ಹಾಗೂ ಹೋರಾಟಗಾರರು ಪಾಲ್ಗೊಂಡಿದ್ದರು.

ಯುವಕರು ಕ್ರೀಡೆಯಲ್ಲಿ ತೊಡಗಿದರೆ ಸಶಕ್ತ ಭಾರತ ನಿರ್ಮಾಣ ಸಾಧ್ಯ: ಡಾ.ಚಂದ್ರಕಾಂತ್ ಗಂಗಶೆಟ್ಟಿ



ಬೀದರ್,ಸೆ.13-

ಸಶಕ್ತ ಹಾಗೂ ಸದೃಢ ಭಾರತ ನಿರ್ಮಾಣದಲ್ಲಿ ಯುವಜನರ ಪಾತ್ರ ಮಹತ್ವದ್ದಾಗಿದ್ದು, ಪ್ರತಿಯೊಬ್ಬ ವಿದ್ಯಾರ್ಥಿಯೂ ಶಿಕ್ಷಣದ ಜೊತೆಗೆ ಕ್ರೀಡೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಡಾ. ಚಂದ್ರಕಾಂತ್ ಗಂಗಶೆಟ್ಟಿ ಹೇಳಿದರು.

ಬಸವಕಲ್ಯಾಣದ ಐಡಿಯಲ್ ಪದವಿ ಪೂರ್ವ ಕಾಲೇಜಿನಲ್ಲಿ 2026-27ನೇ ಸಾಲಿನ ತಾಲೂಕು ಮಟ್ಟದ ಪದವಿ ಪೂರ್ವ ವಿದ್ಯಾರ್ಥಿಗಳ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದ ಅವರು, ಸ್ವಾಮಿ ವಿವೇಕಾನಂದರ ''ಸದೃಢ ಶರೀರದಲ್ಲಿ ಸದೃಢ ಮನಸ್ಸು'' ಎಂಬ ಸಂದೇಶವನ್ನು ಉಲ್ಲೇಖಿಸಿ, ಆರೋಗ್ಯ ಮತ್ತು ಚಾರಿತ್ರ್ಯ ಎರಡೂ ಜೀವನದಲ್ಲಿ ಅತ್ಯಂತ ಮುಖ್ಯ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಐಡಿಯಲ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಮುಜಾಹಿದ್ ಪಾಶಾ ಖುರೇಶಿ ಮಾತನಾಡಿ, ಕ್ರೀಡಾಕೂಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿನಿಯರು ಭಾಗವಹಿಸಿರುವುದು ಸಂತಸದ ಸಂಗತಿ. ತಾಲೂಕು ಮಟ್ಟದಿಂದ ಜಿಲ್ಲಾ, ರಾಜ್ಯ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಸವಕಲ್ಯಾಣ ಹಾಗೂ ದೇಶಕ್ಕೆ ಕೀರ್ತಿ ತರುವಂತೆ ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.

ಕ್ರೀಡೆಯಲ್ಲಿ ಸೋಲು-ಗೆಲುವಿಗಿಂತ ಭಾಗವಹಿಸುವ ಮನೋಭಾವ ಮುಖ್ಯ. ಸೋಲು ಮತ್ತು ಗೆಲುವನ್ನು ಸಮಾನವಾಗಿ ಸ್ವೀಕರಿಸಿ ನಿರಂತರ ಪರಿಶ್ರಮದಿಂದ ಸಾಧನೆಯತ್ತ ಸಾಗಬೇಕು ಎಂದು ಅವರು ಹೇಳಿದರು.

2026ರ ಫೀಫಾ ವಿಶ್ವಕಪ್‌ನಲ್ಲಿ ಲಮೀನ್ ಯಮಾಲ್ ಅವರಂತಹ ಯುವ ಪ್ರತಿಭೆಗಳು ವಿಶ್ವದ ಗಮನ ಸೆಳೆದಿರುವುದನ್ನು ಉದಾಹರಿಸಿ, ವಿದ್ಯಾರ್ಥಿಗಳೂ ತಮ್ಮ ಪ್ರತಿಭೆಯನ್ನು ಬೆಳೆಸಿಕೊಂಡು ಉನ್ನತ ಮಟ್ಟದ ಕ್ರೀಡಾಪಟುಗಳಾಗಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ನಿವೃತ್ತ ಉಪನಿರ್ದೇಶಕ ಚಂದ್ರಕಾಂತ್ ಶಾಬಾದಕರ್ ಜಿಲ್ಲಾ ಪ್ರಾಂಶುಪಾಲರ ಸಂಘದ ಅಧ್ಯಕ್ಷ ಓಂಪ್ರಕಾಶ್ ಧಡ್ಡೆ, ಸಂಘದ ರಾಜ್ಯ ಪ್ರತಿನಿಧಿಗಳಾದ ಬಾಲಾಜಿ ವಾಡೇಕರ್ ಪ್ರಧಾನ ಕಾರ್ಯದರ್ಶಿ ಶಿವರಾಜ್ ಬೀರಾದಾರ್ ಉಪನ್ಯಾಸಕರ ಸಂಘದ ಜಿಲ್ಲಾಧ್ಯಕ್ಷ ಶಿವಕುಮಾರ್ ಕೋಸಂ, ಕಾರ್ಯಾಧ್ಯಕ್ಷ ಶ್ರೀಕಾಂತ್ ದಾಡಗೆ, ಜಿಲ್ಲಾ ಕ್ರೀಡಾ ಸಂಯೋಜಕ ಶರಣಪ್ಪ ನಾಟೀಕರ್‌ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಮುಜತಹಿದ್ ಉಮರ್, ಮುಕ್ತದಿರ್ ಉಮರ್ ಖುರೇಶಿ, ಪ್ರಾಚಾರ್ಯ ವಿ.ವೇಂಕಟರಾವ್, ಕ್ರೀಡಾ ನಿರ್ದೇಶಕ ರಹೀಮ್ ಕಾರಿಗಾರ್ ಕರೀಮ್, ಶಿವಕುಮಾರ್, ಸತೀಶ್ ಹಾಗೂ ಸತೀಶ್ ಧನಗಾವೆ ಸೇರಿದಂತೆ ತಾಲ್ಲೂಕಿನ ವಿವಿಧ ಕಾಲೇಜುಗಳ ಪ್ರಾಂಶುಪಾಲರು, ದೈಹಿಕ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ರಾಜಕುಮಾರ್ ರಾಠೋಡ್ ಸ್ವಾಗತಿಸಿದರು. ಉಪಪ್ರಾಚಾರ್ಯ ಶಾಂತಲಿಂಗ್ ಮಠಪತಿ ನಿರೂಪಿಸಿ, ವಂದಿಸಿದರು.

ನಿಮ್ಮೂರು ಸುದ್ದಿ

ಸಂಪಾದಕೀಯ



ಪ್ರಧಾನಮಂತ್ರಿಯೇ ಹುದ್ದೆಯ ಘನತೆ ಮರೆತರೆ?

ಜುಲೈಯಲ್ಲಿ ಸಂಭವಿಸಿದ ಯುವಜನರ ಪ್ರತಿಭಟನೆಯ ನಂತರ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ದೇಶದ ಹಲವೆಡೆ ಮಾಡಿದ ಭಾಷಣಗಳು ಈಗ ತೀವ್ರ ಚರ್ಚೆಗೆ ಗ್ರಾಸವಾಗಿವೆ. ಆಗಸ್ಟ್ 15ರಂದು ದಿಲ್ಲಿಯ ಕೆಂಪುಕೋಟೆಯಲ್ಲಿ ದೇಶವನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ತನ್ನ ವಿರೋಧಿಗಳಿಗೆ ವೈಚಾರಿಕ ನಕ್ಸಲ್ (ದಿಮಾಗಿ ನಕ್ಸಲ್) ಎಂದು ಬಿರುದು ನೀಡಿದರು. ಸೆಪ್ಟಂಬರ್ 5ರಂದು ದಿಲ್ಲಿಯ ಶ್ರೀರಾಮ ಕಾಲೇಜಿನ ಶತಮಾನೋತ್ಸವದ ಸಂದರ್ಭದಲ್ಲಿ ಸರಕಾರದ ನೀತಿಯನ್ನು ಟೀಕಿಸುವವರನ್ನು ವ್ಯಂಗ್ಯವಾಗಿ ಚುಚ್ಚಿದರು. ಕೆಂಪು ಕೋಟೆಯ ಭಾಷಣದಲ್ಲಿ ತಾನು ದಿಮಾಗಿ ನಕ್ಸಲ್ ಎಂಬ ಚಿಕ್ಕ ಹೋಮಿಯೋಪತಿ ಔಷಧಿಯನ್ನು ಅವರಿಗೆ ನೀಡಿದ್ದೇನೆ ಎಂದರು ಮಾತ್ರವಲ್ಲ ಉತ್ತರ ಭಾರತದಲ್ಲಿ ವಾಡಿಕೆಯಲ್ಲಿರುವ ನಾರಾಝ್ ಫೂಫಾ (ಸೋದರತ್ತೆಯ ಗಂಡ- ಮದುವೆ ಮುಂಜಿ ಮುಂತಾದ ಕೌಟುಂಬಿಕ ಸಮಾರಂಭಗಳಲ್ಲಿ ಸಣ್ಣ ಪುಟ್ಟ ಎಡವಟ್ಟಿಗೂ ಮುನಿಸಿಕೊಳ್ಳುವವನು!) ಎಂಬ ಪದಪುಂಜವನ್ನು ತನ್ನ ರಾಜಕೀಯ ವಿರೋಧಿಗಳಿಗೆ ಬಳಸಿದರು.

ಈ ವಾರದ ಆರಂಭದಲ್ಲಿ ಗುಜರಾತ್ ಮತ್ತು ಮುಂಬೈಯ ವಿವಿಧ ಸಾರ್ವಜನಿಕ ಸಮಾರಂಭಗಳಲ್ಲಿ ಭಾಗವಹಿಸಿದ ಮೋದಿಯವರು ಅದೇ ಧಾಟಿಯಲ್ಲಿ ಮತ್ತೆ ಭಾಷಣ ಮಾಡಿದರು. ಪ್ರಧಾನಿಯ ನೆಲೆಯಲ್ಲಿ ವಿಭಿನ್ನ ಸರಕಾರಿ ಮತ್ತು ಸರಕಾರೇತರ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಉತ್ತಮ ಸಂಪ್ರದಾಯ. ಸಂದರ್ಭೋಚಿತವಾಗಿ ದೇಶದ ವಿದ್ಯಮಾನಗಳ ಬಗ್ಗೆ ಆ ಸನ್ನಿವೇಶಗಳಲ್ಲಿ ಸರಕಾರದ ಧೋರಣೆಯನ್ನು ವಿವರಿಸುವುದು ತಪ್ಪಲ್ಲ. ಆದರೆ ಮಾತನಾಡುವಾಗ ತಮ್ಮ ಸ್ಥಾನದ ಘನತೆಯನ್ನು ಕಾಪಾಡುವಂತಿರಬೇಕು.

ದೇಶದ ಸಂವಿಧಾನದ ಪ್ರಕಾರ ಲೋಕಸಭೆಯ ಚುನಾವಣೆಯಲ್ಲಿ ಬಹುಮತ ಗಳಿಸಿದ ಪಕ್ಷದ ನಾಯಕರು ಪ್ರಧಾನ ಮಂತ್ರಿಯಾಗಿ ರಾಷ್ಟ್ರಾಧ್ಯಕ್ಷರಿಂದ ನೇಮಕಗೊಳ್ಳುತ್ತಾರೆ. ಅವರು ಆ ಸ್ಥಾನಕ್ಕೆ ಸಂಬಂಧಿಸಿದ ಪ್ರತಿಜ್ಞೆಯನ್ನು ಮಾಡುವಾಗ ಸಂವಿಧಾನಕ್ಕೆ ತನ್ನ ಬದ್ಧತೆಯನ್ನು ಅಂಗೀಕರಿಸುತ್ತಾರೆ. ಈ ಕಾರಣಕ್ಕಾಗಿ ಪ್ರಧಾನಿಯಾದವರು ಸಂವಿಧಾನದ ಚೌಕಟ್ಟಿನಲ್ಲಿಯೇ ವರ್ತಿಸಬೇಕು. ಅವರು ಇಡೀ ದೇಶದ ಪ್ರಧಾನಿಗಳು, ಒಂದು ಪಕ್ಷದವರಲ್ಲ. ತಮ್ಮ ಸ್ಥಾನದ ಗೌರವವನ್ನು ಕಾಯ್ದುಕೊಳ್ಳುವ ನೈತಿಕ ಹೊಣೆಗಾರಿಕೆ ಪ್ರಧಾನಿ ಪಟ್ಟ ಏರಿದವರಲ್ಲಿರಬೇಕು.

ಮೇಲೆ ಉಲ್ಲೇಖಿಸಿದ ಗುಜರಾತ್‌ನ ಕಾರ್ಯಕ್ರಮಗಳು ಸರಕಾರದ ಯೋಜನೆಗಳಿಗೆ ಸಂಬಂಧಿಸಿದವು. ಹೀಗಾಗಿ ಆ ಸನ್ನಿವೇಶದಲ್ಲಿ ಪ್ರಧಾನಿಯ ಮಾತು ಆ ಯೋಜನೆಗಳಿಗೆ ಸೀಮಿತವಾಗಿರಬೇಕು. ಕೆಲವೊಮ್ಮೆ ಪೂರ್ಣಗೊಂಡ ಯೋಜನೆಯ ನಂತರ ಸರಕಾರವು ಏನು ಹೊಸ ಯೋಜನೆಗಳನ್ನು ಕೈಗೊಳ್ಳಲಿದೆ ಎಂದು ಪ್ರಧಾನಿಯವರು ಅಲ್ಲಿ ಘೋಷಿಸಬಹುದು. ಇದಕ್ಕೆ ವಿರುದ್ಧವಾಗಿ ಮೋದಿಯವರು ದೇಶದಲ್ಲಿ ಈಗ ಸುದ್ದಿಯಾಗುತ್ತಿರುವ ಯುವಜನರ ಅಸಹನೆಯ ಬಗ್ಗೆ, ತಮ್ಮ ಸರಕಾರದ ವೈಫಲ್ಯಗಳ ಬಗ್ಗೆ ಸಾರ್ವಜನಿಕವಾಗಿ ಬರುತ್ತಿರುವ ಟೀಕೆ ಟಿಪ್ಪಣಿಗಳ ಬಗ್ಗೆ ಪ್ರತಿಕ್ರಿಯಿಸಿದ್ದಾರೆ. ಟೀಕೆಗಳಿಗೆ ಸಕಾರಾತ್ಮಕವಾಗಿ ಉತ್ತರವನ್ನು ಈ ಸಂದರ್ಭಗಳಲ್ಲಿ ನೀಡಿದರೆ ತಪ್ಪೇನಿಲ್ಲ. ಆದರೆ ತಮ್ಮ ಧೋರಣೆಯನ್ನು ಟೀಕಿಸಿದವರ, ತಮ್ಮ ಸರಕಾರದ ಲೋಪಗಳನ್ನು ಎತ್ತಿ ತೋರಿಸಿದವರ ಬಗ್ಗೆ ಲಘುವಾಗಿ ಮಾತನಾಡುವುದು, ಅವರನ್ನು ಹೀಗಳೆಯುವುದು ಪ್ರಧಾನಿ ಸ್ಥಾನಕ್ಕೆ ಶೋಭೆ ತರುವುದಿಲ್ಲ.

ಮೋದಿಯವರ ಈ ತೆರನಾದ ವರ್ತನೆ ಹೊಸದೇನಲ್ಲ. ಸಂಸತ್ತಿನಲ್ಲಿ ತಮ್ಮ ಭಾಷಣದ ವೇಳೆ, ಸ್ವಾತಂತ್ರ್ಯೋತ್ಸವ ಮತ್ತು ಗಣರಾಜ್ಯೋತ್ಸವದಂತಹ ವಿಶೇಷ ಸಂದರ್ಭಗಳಲ್ಲಿ ಹಾಗೂ ವಿದೇಶಗಳಲ್ಲಿ ಅನಿವಾಸಿ ಭಾರತೀಯರನ್ನು ಉದ್ದೇಶಿಸಿ ಮಾತನಾಡುವಾಗಲೂ ತಮ್ಮನ್ನು ಟೀಕಿಸಿದವರ ಮತ್ತು ಪ್ರಶ್ನಿಸಿದವರ ಬಗ್ಗೆ ನಿಕೃಷ್ಟವಾದ ಮಾತುಗಳನ್ನು ಆಡಿದ್ದಾರೆ. ಪ್ರಧಾನಿ ಪದಕ್ಕೆ ಏರುವ ಮೊದಲು ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದಾಗಲೂ ವಿದೇಶಯಾತ್ರೆಯ ಸಂದರ್ಭದಲ್ಲಿ ದೇಶವನ್ನು ಹೀಯಾಳಿಸಿದ್ದರು. ಪ್ರಧಾನಿಯಾದ ಹೊಸತರಲ್ಲಿ ಪೌರ್ವಾತ್ಯ ರಾಷ್ಟ್ರ ಒಂದಕ್ಕೆ ಭೇಟಿ ನೀಡಿದಾಗ ಈ ಮಾತು ಹೇಳಿದ್ದರು: 2014ರ ಮೊದಲು, ವಿದೇಶದಲ್ಲಿರುವ ಅನೇಕ ಭಾರತೀಯರ ಪ್ರಕಾರ ಭಾರತದಲ್ಲಿ ಹುಟ್ಟಿದ್ದೇ ಪಾಪ ಎಂಬ ಭಾವನೆ ಪ್ರಚಲಿತವಾಗಿತ್ತು, ನಾವು ಅಧಿಕಾರಕ್ಕೆ ಬಂದ ಮೇಲೆ ಈ ಚಿಂತನೆ ಬದಲಾಗಿದೆ.

ವಿದೇಶದಲ್ಲಿ ಭಾರತದ ಪ್ರಧಾನಿಯವರು ದೇಶವನ್ನು ಪ್ರತಿನಿಧಿಸುತ್ತಾರೆ. ಅವರು ಅಲ್ಲಿ ಪಕ್ಷಾತೀತರಂತೆ ವರ್ತಿಸಬೇಕು. ಆತಿಥೇಯ ದೇಶದ ರಾಜಕೀಯದ ಬಗ್ಗೆ ಅಲ್ಲಿ ಮಾತನಾಡುವುದು ಮತ್ತು ಅಲ್ಲಿನ ಒಬ್ಬ ವ್ಯಕ್ತಿಯ ಬಗ್ಗೆ ಪ್ರಚಾರ ಮಾಡುವುದು ತಾವು ಪ್ರತಿನಿಧಿಸುವ ದೇಶದ ಬಗ್ಗೆ ಆ ದೇಶದಲ್ಲಿ ಕೆಟ್ಟ ಅಭಿಪ್ರಾಯವನ್ನು ಮೂಡಿಸುತ್ತದೆ. ಪ್ರಧಾನಿಯಾಗಿದ್ದಾಗ ಅಮೆರಿಕಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಹ್ಯೂಸ್ಟನ್‌ನಲ್ಲಿ ಅನಿವಾಸಿ ಭಾರತೀಯರ ಬೃಹತ್ ಸಭೆಯಲ್ಲಿ ಜಗಜ್ಜಾಹೀರಾಗಿ, ಅಬ್ ಕೀ ಬಾರ್ ಟ್ರಂಪ್ ಕೀ ಸರಕಾರ್ (ಈ ಬಾರಿ ಟ್ರಂಪ್ ಸರಕಾರ) ಎಂದು ಸಭಿಕರಿಗೆ ಕರೆಕೊಟ್ಟದ್ದು ತಮ್ಮ ಸ್ಥಾನಕ್ಕೆ ಮಾಡಿದ ಅಗೌರವ.

ದೇಶದ ಸ್ವಾತಂತ್ರ್ಯೋತ್ಸವ ಮತ್ತು ಗಣರಾಜ್ಯೋತ್ಸವವನ್ನು ಪಕ್ಷಾತೀತರಾಗಿ ಎಲ್ಲರೂ ಆಚರಿಸಬೇಕು. ಸ್ವತಂತ್ರ ರಾಷ್ಟ್ರವಾಗಿ ಅಸ್ತಿತ್ವಕ್ಕೆ ಬಂದುದರ ಸಂಭ್ರಮಾಚರಣೆಯ ದಿನಗಳವು. ಇಡೀ ರಾಷ್ಟ್ರವನ್ನು ಪ್ರತಿನಿಧಿಸುವ ಪ್ರಧಾನ ಮಂತ್ರಿ ಮತ್ತು ರಾಷ್ಟ್ರಪತಿಯವರು ದೇಶವನ್ನು ಉದ್ದೇಶಿಸಿ ಮಾತನಾಡುವ ಸಂಪ್ರದಾಯ ಅನೂಚಾನವಾಗಿ ಬೆಳೆದು ಬಂದಿದೆ. ಆ ಸಂದರ್ಭದಲ್ಲಿ ಪ್ರಧಾನಿಯವರು ಸಂಯಮದಿಂದ, ಎಲ್ಲರೂ ಸಮಾನರು ಎಂಬ ಭಾವನೆಯನ್ನು ಉತ್ತೇಜಿಸಲು ಮುತ್ಸದ್ದಿಯಂತೆ ಮಾತನಾಡಬೇಕು.

ಸಂಸತ್ತಿನ ಚರ್ಚೆಗಳ ಸಂದರ್ಭದಲ್ಲಿಯೂ ಮೋದಿಯವರ ವರ್ತನೆ ಅನೇಕ ಬಾರಿ ಬಾಲಿಶವಾಗಿರುತ್ತದೆ. ದಿ. ಮನಮೋಹನ್ ಸಿಂಗರು ರೈನ್ ಕೋಟು ಹಾಕಿ ಸ್ನಾನ ಮಾಡುತ್ತಾರೆ ಎಂದಿದ್ದು, ಸಂಸದೆ ರೇಣುಕಾ ಚೌಧರಿಯವರನ್ನು ಶೂರ್ಪನಖಿಗೆ ಹೋಲಿಸಿ ಅವಹೇಳನ ಮಾಡಿದುದು-ಇಂತಹ ಉದ್ಗಾರಗಳು ಸದನಕ್ಕೂ, ಪ್ರಧಾನಿಯವರ ಸ್ಥಾನಕ್ಕೂ ಗೌರವ ತರುವುದಿಲ್ಲ. ಸಂಸತ್ತಿನ ಹೊರಗೆ ರಾಜಕೀಯ ಸಮಾವೇಶಗಳಲ್ಲಿ ವಿರೋಧಿಗಳನ್ನು ಟೀಕಿಸಬಹುದು; ಆದರೆ ಅಲ್ಲಿಯೂ ಪ್ರಧಾನಿಯವರು ತಮ್ಮ ಸ್ಥಾನದ ಘನತೆಯನ್ನು ಉಳಿಸಿಕೊಳ್ಳುವುದಿಲ್ಲ .

ರಾಷ್ಟ್ರದ ಪ್ರಮುಖ ನಾಯಕರಾಗಿ ತನ್ನ ಸಾರ್ವಜನಿಕ ಸಭೆಗಳಲ್ಲಿ, ಸಂಸತ್ತಿನಲ್ಲಿ, ವಿದೇಶಗಳಲ್ಲಿ ಶಿಷ್ಟಾಚಾರ ಮತ್ತು ಸಂದರ್ಭದ ಔಚಿತ್ಯಕ್ಕೆ ಅನುಸಾರವಾಗಿ ಮಾತನಾಡಬೇಕು. ಅಭಿಪ್ರಾಯ ಭೇದಗಳನ್ನು ಗೌರವಿಸುವ ಮನೋವೃತ್ತಿಯನ್ನು ಹೊಂದಿರುವುದು ಮುತ್ಸದ್ದಿಯ ಲಕ್ಷಣ. ತನ್ನ ಮಾತುಗಳಲ್ಲಿ ವ್ಯಂಗ್ಯ, ಕುಚೋದ್ಯ, ಪರಿಹಾಸ್ಯ, ಹಿಂದಿನ ನಾಯಕರನ್ನು ಹೀಯಾಳಿಸುವ ಗುಣಗಳು ಅಪ್ರಬುದ್ಧತೆಯ ಸಂಕೇತಗಳು. ಅಧಿಕಾರ ಯಾವತ್ತೂ ಶಾಶ್ವತವಲ್ಲ; ಆದರೆ ಅಧಿಕಾರಾವಧಿಯಲ್ಲಿ ತನ್ನ ಸ್ಥಾನದ ಗೌರವವನ್ನು ಹೇಗೆ ಕಾಪಾಡಿದರು ಮತ್ತು ಸಾರ್ವಜನಿಕ ಜೀವನದಲ್ಲಿ ಮಾದರಿಯಾದ ಕೊಡುಗೆ ಏನು ನೀಡಿದ್ದಾರೆ ಎಂಬುದನ್ನು ಮುಂದಿನ ಪೀಳಿಗೆಯವರು ಗಮನಿಸಿ ಮೌಲ್ಯಮಾಪನವನ್ನು ಮಾಡುತ್ತಾರೆ.

ಲಿಂಗ್ಡೋ ಸಮಿತಿ ನಿಯಮ ಪಕ್ಕಕ್ಕೆ; ಕ್ಯಾಂಪಸ್ ಪ್ರಜಾಪ್ರಭುತ್ವಕ್ಕೆ ಕತ್ತರಿ: ವಿದ್ಯಾರ್ಥಿ ಸಂಘಟನೆಗಳ ದೂರವಿಡಲು ಸರ್ಕಾರದ ಹುನ್ನಾರ?



ಕಾಗದಕ್ಕಷ್ಟೇ ಸೀಮಿತವಾಯಿತೇ ಲಿಂಗ್ಡೋ ಸಮಿತಿ ಶಿಫಾರಸುಗಳು? ಸಮಿತಿಯ ಸ್ಪಷ್ಟ ಮಾರ್ಗದರ್ಶಿ ಸೂತ್ರಗಳಿದ್ದರೂ ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆ ನಡೆಸಲು ಸರ್ಕಾರಗಳು ಹಿಂಜರಿಯುತ್ತಿರುವುದು ಏಕೆ? ಪಕ್ಷ ಯಾವುದೇ ಇರಲಿ, ಅಧಿಕಾರಕ್ಕೆ ಬಂದ ತಕ್ಷಣ ಕ್ಯಾಂಪಸ್ ಪ್ರಜಾಪ್ರಭುತ್ವವನ್ನು ಹತೋಟಿಯಲ್ಲಿಡಲು ಯತ್ನಿಸುವ ಆಡಳಿತ ಯಂತ್ರದ ಇಬ್ಬಂದಿ ನೀತಿ ಇದಲ್ಲವೇ? ಯುವ ಧ್ವನಿಯನ್ನು ಅಡಗಿಸುವುದು ಯತ್ನವಲ್ಲವೇ?

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಹಾಗೂ ಕಾಲೇಜು ಕ್ಯಾಂಪಸ್‌ಗಳಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬೆಳೆಸಲು ವಿದ್ಯಾರ್ಥಿ ಸಂಘದ ಚುನಾವಣೆಗಳು ಅತ್ಯಂತ ಅಗತ್ಯ. ದೇಶದ ಉನ್ನತ ನ್ಯಾಯಾಲಯದ ನಿರ್ದೇಶನದಂತೆ ಜೆ.ಎಂ. ಲಿಂಗ್ಡೋ ಸಮಿತಿಯು ಶಿಫಾರಸು ಮಾಡಿದ ನಿಯಮಾವಳಿಗಳ ಅನ್ವಯ ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘಗಳಿಗೆ ಚುನಾವಣೆ ನಡೆಸಬೇಕು ಎಂಬ ಸ್ಪಷ್ಟ ನಿಯಮ ಹಾಗೂ ಸರ್ಕಾರದ ಆದೇಶವಿದೆ. ಆದರೆ ಪ್ರಸ್ತುತ ಕ್ಯಾಂಪಸ್‌ಗಳಿಂದ ವಿದ್ಯಾರ್ಥಿ ಸಂಘಟನೆಗಳನ್ನು ದೂರವಿಡಲಾಗುತ್ತಿದೆ ಎಂಬ ಗಂಭೀರ ಆರೋಪ ಕೇಳಿಬರುತ್ತಿದೆ.

ಈ ಮೂಲಕ ಕಾಗದದ ಮೇಲೆ ಪ್ರಜಾಪ್ರಭುತ್ವದ ಮಾತುಗಳನ್ನು ಆಡುವ ಆಡಳಿತ ವ್ಯವಸ್ಥೆಯು, ಪ್ರಾಯೋಗಿಕವಾಗಿ ಕ್ಯಾಂಪಸ್‌ಗಳಲ್ಲಿ ವಿದ್ಯಾರ್ಥಿಗಳು ಸಂಘಟಿತರಾಗುವುದನ್ನು ಮತ್ತು ತಮ್ಮ ಹಕ್ಕುಗಳಿಗಾಗಿ ಧ್ವನಿ ಎತ್ತುವುದನ್ನು ನಿಯಂತ್ರಿಸಲು ಯತ್ನಿಸುತ್ತಿದೆ. ಶೈಕ್ಷಣಿಕ ಸಂಸ್ಥೆಗಳಲ್ಲಿ ಆಡಳಿತ ಮಂಡಳಿಗಳ ಲೋಪದೋಷಗಳನ್ನು ಪ್ರಶ್ನಿಸುವ ಧ್ವನಿಗಳನ್ನು ಅಡಗಿಸಲು ಸರ್ಕಾರಗಳು ಇಂತಹ ಪರೋಕ್ಷ ನಿಷೇಧ ಅಥವಾ ನಿರ್ಬಂಧದ ತಂತ್ರಗಳನ್ನು ಬಳಸುತ್ತಿವೆ. ಪ್ರಜಾಸತ್ತಾತ್ಮಕ ರೀತಿಯಲ್ಲಿ ಚುನಾವಣೆಗಳನ್ನು ನಡೆಸಿ ಯುವ ನಾಯಕರನ್ನು ರೂಪಿಸುವ ಬದಲು, ತಮಗೆ ಅನುಕೂಲಕರವಾದ ನೇಮಕ ಪದ್ಧತಿಯನ್ನು ಅಥವಾ ರಾಜಕೀಯ ಪ್ರಭಾವ ನೆಪ ಒಡ್ಡಿ ಸಂಘಟನೆಗಳನ್ನು ಕ್ಯಾಂಪಸ್‌ನಿಂದ ಹೊರಗಿಡುವ ಹಾದಿಯನ್ನು ಸರ್ಕಾರಗಳು ತುಳಿಯುತ್ತಿರುವುದು ಆತಂಕಕಾರಿ.

ಏನಿದು ಲಿಂಗ್ಡೋ ಸಮಿತಿ, ಅದು ಏನು ಹೇಳುತ್ತದೆ?

ಉನ್ನತ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿ ಸಂಘಗಳ ಚುನಾವಣೆಯಲ್ಲಿ ಅತಿಯಾಗುತ್ತಿದ್ದ ಹಣಬಲ, ತೋಳುಬಲ, ರಾಜಕೀಯ ಪಕ್ಷಗಳ ನೇರ ಹಸ್ತಕ್ಷೇಪ ಮತ್ತು ಹಿಂಸಾಚಾರವನ್ನು ತಡೆಯಲು ದೇಶದ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ 2005ರಲ್ಲಿ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ಈ ಉನ್ನತ ಮಟ್ಟದ ಸಮಿತಿಯನ್ನು ರಚಿಸಿತು. ದೇಶದ ಮಾಜಿ ಮುಖ್ಯ ಚುನಾವಣೆ ಆಯುಕ್ತರಾದ ಜೆ.ಎಂ. ಲಿಂಗ್ಡೋ (..) ಅವರ ಅಧ್ಯಕ್ಷತೆಯಲ್ಲಿ ರಚನೆಯಾದ ಕಾರಣ ಇದನ್ನು ಲಿಂಗ್ಡೋ ಸಮಿತಿ ಎಂದು ಕರೆಯಲಾಗುತ್ತದೆ. ಈ ಸಮಿತಿಯು 2006ರಲ್ಲಿ ತನ್ನ ವರದಿಯನ್ನು ಸಲ್ಲಿಸಿದ್ದು, ಶೈಕ್ಷಣಿಕ ವಾತಾವರಣ ಕೆಡದಂತೆ ಪಾರದರ್ಶಕ ಚುನಾವಣೆ ನಡೆಸಲು ಪ್ರಮುಖ ಶಿಫಾರಸುಗಳನ್ನು ಮಾಡಿದೆ.

ಈ ಸಮಿತಿ ಶಿಫಾರಸಿನಂತೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ನಿಗದಿತ ವಯೋಮಿತಿ (ಪದವಿ ವಿದ್ಯಾರ್ಥಿಗಳಿಗೆ 17 ರಿಂದ 22 ವರ್ಷ) ಇರಬೇಕು. ಅಭ್ಯರ್ಥಿಯು ಕನಿಷ್ಠ 75% ಹಾಜರಾತಿ ಹೊಂದಿರಬೇಕು ಮತ್ತು ಯಾವುದೇ ಪರೀಕ್ಷೆ ಉತ್ತೀರ್ಣವಾಗದೆ ಉಳಿಸಿಕೊಂಡಿರಬಾರದು () ಅಥವಾ ಅಪರಾಧ ಹಿನ್ನೆಲೆ ಹೊಂದಿರಬಾರದು. ಚುನಾವಣೆಗೆ ಒಬ್ಬ ಅಭ್ಯರ್ಥಿ ಗರಿಷ್ಠ ₹5,000 ಮಾತ್ರ ವೆಚ್ಚ ಮಾಡಬಹುದು ಮತ್ತು ಫಲಿತಾಂಶ ಬಂದ 2 ವಾರಗಳಲ್ಲಿ ಲೆಕ್ಕಪತ್ರ ಸಲ್ಲಿಸಬೇಕು.

ಸಮಿತಿ ಶಿಫಾರಸಿನಂತೆ ಚುನಾವಣೆಯಲ್ಲಿ ಮುದ್ರಿತ ಪೋಸ್ಟರ್‌ಗಳು, ಕರಪತ್ರಗಳು ಹಾಗೂ ಧ್ವನಿವರ್ಧಕಗಳ ಬಳಕೆಯನ್ನು ನಿಷೇಧಿಸಲಾಗಿದೆ. ಪೋಸ್ಟರ್‌ಗಳನ್ನು ಸಂಸ್ಥೆ ನಿಗದಿಪಡಿಸಿದ ಸ್ಥಳದಲ್ಲಿ ಹಸ್ತಪ್ರತಿಯಾಗಿ ಮಾತ್ರ ಅಂಟಿಸಬೇಕು. ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಯಾವುದೇ ರಾಜಕೀಯ ಪಕ್ಷಗಳ ನೇರ ಪ್ರಭಾವ, ಹಣಕಾಸಿನ ನೆರವು ಅಥವಾ ಪಕ್ಷದ ಚಿಹ್ನೆ/ಬ್ಯಾನರ್‌ಗಳನ್ನು ಬಳಸುವಂತಿಲ್ಲ. ನಾಮಪತ್ರ ಸಲ್ಲಿಕೆಯಿಂದ ಹಿಡಿದು ಫಲಿತಾಂಶ ಪ್ರಕಟಣೆವರೆಗಿನ ಸಂಪೂರ್ಣ ಪ್ರಕ್ರಿಯೆಯು 10 ದಿನ ಮೀರಬಾರದು. ಆದರೆ ಇದೀಗ ರಾಜ್ಯ ಸರ್ಕಾರವು ಕ್ಯಾಂಪಸ್ ಪ್ರಜಾಪ್ರಭುತ್ವಕ್ಕೆ ಕತ್ತರಿ ಹಾಕುತ್ತಿದೆ. ವಿದ್ಯಾರ್ಥಿ ಸಂಘಟನೆಗಳ ದೂರವಿಡಲು ಸರ್ಕಾರದ ಹುನ್ನಾರ ನಡೆಯುತ್ತಿದೆ ಎಂಬ ಆರೋಪವಿದೆ.

ಈ ಬಗ್ಗೆ ಈದಿನ ಡಾಟ್ ಕಾಮ್‌ಗೆ ಪ್ರತಿಕ್ರಿಯಿಸಿರುವ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ರಾಜ್ಯ ಸಮಿತಿಯ ಅಧ್ಯಕ್ಷ ಶಿವಪ್ಪ ಅಂಬ್ಳಿಕಲ್ ಪ್ರತಿಕ್ರಿಯಿಸಿದ್ದು, ''ಕರ್ನಾಟಕ ರಾಜ್ಯ ಸರ್ಕಾರವು 37 ವರ್ಷ ವಿದ್ಯಾರ್ಥಿ [illegible] ನಡೆಸುತ್ತೇವೆ, ಆದರೆ ಕ್ಯಾಂಪಸ್ ಒಳಗಡೆ ಇರುವ ವಿದ್ಯಾರ್ಥಿ ಸಂಘಟನೆಗಳಿಗೆ ಮಾತ್ರ ಅವಕಾಶ, ಹೊರಗಿನ ವಿದ್ಯಾರ್ಥಿ ಸಂಘಟನೆಗಳಿಗೆ ಅವಕಾಶವಿಲ್ಲ ಎಂದಿದ್ದಾರೆ. ಈ ಮೂಲಕ ವಿದ್ಯಾರ್ಥಿ ಸಂಘಟನೆಗಳನ್ನು ಕ್ಯಾಂಪಸ್‌ಗಳಿಂದ ರಾಜ್ಯ ಸರ್ಕಾರ ದೂರವಿಟ್ಟಿದೆ'' ಎಂದು ಆರೋಪಿಸಿದ್ದಾರೆ.

''ಇದನ್ನು ಎಸ್‌ಎಫ್‌ಐ ಸೇರಿದಂತೆ ಹಲವು ಸಂಘಟನೆಗಳು ಪ್ರಶ್ನಿಸಿದೆ. ಅಷ್ಟಕ್ಕೂ ವಿದ್ಯಾರ್ಥಿ ಸಂಘಟನೆ ಎಂದರೆ ಭಯವೇಕೆ? ಪ್ರಜಾಪ್ರಭುತ್ವ ದೇಶದಲ್ಲಿ ಕಾಲೇಜುಗಳಲ್ಲಿ ನಮ್ಮ ಸಂಘಟನೆಯ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಹಕ್ಕು ನಮಗಿದೆ. ಉಳಿದ ರಾಜ್ಯಗಳಲ್ಲಿ ಅವಕಾಶವಿದೆ. ಆದರೆ ನಮ್ಮ ಕರ್ನಾಟಕದಲ್ಲಿ ಈ ರೀತಿ ಅವೈಜ್ಞಾನಿಕವಾಗಿ ತೀರ್ಮಾನ ಕೈಗೊಳ್ಳಲಾಗುತ್ತಿದೆ. ಶೇಕಡ 50-60ರಷ್ಟು ಖಾಸಗಿ ಶಿಕ್ಷಣ ಸಂಸ್ಥೆಗಳು ರಾಜ್ಯದ ಶಾಸಕರು, ಸಂಸದರ ಮಾಲೀಕತ್ವದಲ್ಲಿರುವುದು. ವಿದ್ಯಾರ್ಥಿ ಸಂಘಟನೆಗಳಿಗೆ ಕ್ಯಾಂಪಸ್‌ನಲ್ಲಿ ಅವಕಾಶ ಕೊಟ್ಟರೆ ಸಮಸ್ಯೆಗಳ ವಿರುದ್ಧ ದೊಡ್ಡ ಮಟ್ಟದ ಹೋರಾಟ ನಡೆಸುವ ಆತಂಕದಲ್ಲಿ ಸರ್ಕಾರವಿದೆ'' ಎಂದು ದೂರಿದರು.

''ಇತ್ತೀಚೆಗೆ ಜಂತರ್‌ಮಂತರ್‌ನಲ್ಲಿ ಸಿಜೆಪಿ, ಎಸ್‌ಎಫ್‌ಐ ಸೇರಿದಂತೆ ವಿವಿಧ ಸಂಘಟನೆಗಳು ಸೇರಿ ಹೋರಾಟ ನಡೆಸಿ, ಇಡೀ ದೇಶದ ಶಿಕ್ಷಣ ವ್ಯವಸ್ಥೆಯನ್ನೇ ಬದಲಾಯಿಸಿದೆ. ಶಿಕ್ಷಣ ಸಚಿವರು ರಾಜೀನಾಮೆ ನೀಡುವಂತಾಗಿದೆ. ಹಾಗಾಗಿ ರಾಜ್ಯ ಸರ್ಕಾರ ಇಲ್ಲಿ ವಿದ್ಯಾರ್ಥಿ ಸಂಘಟನೆಗಳನ್ನು ಕ್ಯಾಂಪಸ್‌ನಿಂದ ದೂರ ಇಡುವ ಯತ್ನ ನಡೆಸುತ್ತಿದೆ. ಸಚಿವ ಸಂಪುಟದಲ್ಲಿ ಚುನಾವಣೆ ನಡೆಸುವ ಸಂಬಂಧ ತೆಗೆದುಕೊಂಡ ನಿರ್ಧಾರದ ನೋಟಿಫಿಕೇಷನ್ ಇನ್ನೂ ಜಾರಿ ಮಾಡಿಲ್ಲ. ಇಂತಹ ನಡೆಯನ್ನು ಎಸ್‌ಎಫ್‌ಐ ಖಂಡಿಸುತ್ತದೆ'' ಎಂದು ತಿಳಿಸಿದ್ದಾರೆ.

ಅಖಿಲ ಭಾರತ ವಿದ್ಯಾರ್ಥಿಗಳ ಒಕ್ಕೂಟದ () ಕರ್ನಾಟಕ ರಾಜ್ಯ ಅಧ್ಯಕ್ಷೆ ವೀಣಾ ನಾಯ್ಕ್ ಈದಿನ ಡಾಟ್ ಕಾಮ್ ಜತೆ ಮಾತನಾಡಿ, ''ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಚುನಾವಣೆ ನಡೆಸಲು ಮುಂದಾಗಿರುವ ರಾಜ್ಯ ಸರ್ಕಾರ ಈ ಮೊದಲು ವಿದ್ಯಾರ್ಥಿ ಸಂಘಟನೆಗಳಿಗೆ ಕ್ಯಾಂಪಸ್ ಒಳಗೆ ಅವಕಾಶವಿದೆ ಎಂದು ಹೇಳಿ ಈಗ ನಿರ್ಬಂಧ ವಿಧಿಸಿರುವುದು ಖಂಡನೀಯ. ವಿದ್ಯಾರ್ಥಿ ಸಂಘಟನೆಗಳಿಗೆ ಕ್ಯಾಂಪಸ್ ಚುನಾವಣಾ ಪ್ರಕ್ರಿಯೆಯಲ್ಲಿ ಅವಕಾಶ ನೀಡದೆ ಹೋದರೆ ಅದು ಹೇಗೆ ಕ್ಯಾಂಪಸ್ ಡೆಮಾಕ್ರಸಿಯನ್ನು ಉಳಿಸಿಕೊಂಡಂತಾಗುತ್ತೆ? ವಿದ್ಯಾರ್ಥಿಗಳಲ್ಲಿ ರಾಜಕೀಯ ಪ್ರಜ್ಞೆ ಬೆಳೆಯುದಾದರೂ ಹೇಗೆ? ಈಗಾಗಲೇ ಶಾಲೆಗಳಲ್ಲಿ ಮುಖ್ಯ ಶಿಕ್ಷಕರು ಒಬ್ಬ ವಿದ್ಯಾರ್ಥಿಯನ್ನು ಮೊದಲೆ ಆಯ್ಕೆ ಮಾಡಿ ಸಾಂಕೇತಿಕವಾಗಿ ಚುನಾವಣೆ ನಡೆಸುವ ಹಾಗೂ ಅವರನ್ನೆ ಶಾಲೆಯ ನಾಯಕ/ನಾಯಕಿಯರನ್ನಾಗಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ. ಇದೆ ರೀತಿ ಕಾಲೇಜುಗಳಲ್ಲೂ ಮುಂದುವರೆದರೆ ಅದನ್ನು ಕ್ಯಾಂಪಸ್ ವಿದ್ಯಾರ್ಥಿ ಚುನಾವಣೆ ಎಂದು ಹೇಳಲಾಗದು'' ಎಂದರು.

ಇನ್ನು ಈ ಬಗ್ಗೆ ಈದಿನ ಡಾಟ್ ಕಾಮ್‌ಗೆ ಪ್ರತಿಕ್ರಿಯಿಸಿರುವ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಶನ್ () ಕರ್ನಾಟಕ ರಾಜ್ಯ ಸಮಿತಿಯ ಖಜಾಂಚಿ ಸುಭಾಷ್ ಬೆಟ್ಟದಕೊಪ್ಪ, ''ಸರ್ಕಾರ ವಿದ್ಯಾರ್ಥಿ ಸಂಘಟನೆಗಳನ್ನು ಕ್ಯಾಂಪಸ್‌ನಿಂದ ದೂರ ಇಟ್ಟಿರುವುದನ್ನು ನಾವು ಖಂಡಿಸುತ್ತೇವೆ. ರಾಜಕೀಯ ಹಸ್ತಾಕ್ಷೇಪ ಆಗಬಾರದು ಎಂಬ ನೆಪವೊಡ್ಡಿ ಕ್ಯಾಂಪಸ್ ಚುನಾವಣೆಯಿಂದ ವಿದ್ಯಾರ್ಥಿ ಸಂಘಟನೆಗಳನ್ನು ದೂರವಿಡಲಾಗುತ್ತಿದೆ. ಬೇರೆ ರಾಜ್ಯದ ಜೆಎನ್‌ಯು, ದೆಹಲಿ ವಿಶ್ವವಿದ್ಯಾನಿಲಯ ಮೊದಲಾದವುಗಳಲ್ಲಿ ವಿದ್ಯಾರ್ಥಿ ಚುನಾವಣೆ ನಡೆಯುತ್ತದೆ. ಅಲ್ಲೆಲ್ಲ ವಿದ್ಯಾರ್ಥಿ ಸಂಘಟನೆಗಳಿಗೆ ಅವಕಾಶವಿದೆ'' ಎಂದು ಹೇಳಿದರು.

''ಸರ್ಕಾರ ಹೇಳಿರುವಂತೆ ವಿದ್ಯಾರ್ಥಿಗಳಲ್ಲಿ ನಾಯಕತ್ವ, [illegible] ಇರುವುದರಿಂದಾಗಿ ಸಮಸ್ಯೆಗಳ ವಿರುದ್ಧ ವಿದ್ಯಾರ್ಥಿ ಹೋರಾಟಗಳು ನಡೆಯುತ್ತಿರುವುದು. ಔಪಚಾರಿಕವಾಗಿ ವಿದ್ಯಾರ್ಥಿ ಚುನಾವಣೆ ನಡೆಸಲು ಮುಂದಾದರೆ ಅದರಿಂದ ಯಾರಿಗೂ ಲಾಭವಿಲ್ಲ. ಅವರೇ ಒಬ್ಬರನ್ನು ಆಯ್ಕೆ ಮಾಡಿ ನೀನೇ ನಾಯಕ ಎಂದರೆ ಅದು ಪ್ರಜಾಪ್ರಭುತ್ವವಾಗದು. ಇದರಿಂದಾಗಿ ವಿದ್ಯಾರ್ಥಿಗಳ ಪರವಾಗಿ ಧ್ವನಿ ಎತ್ತುವ ವೈಚಾರಿಕತೆ ಬೆಳೆಯುವುದಿಲ್ಲ. ಅಷ್ಟಕ್ಕೂ ಲಿಂಗ್ಡೋ ಸಮಿತಿ ಶಿಫಾರಸಿನಲ್ಲಿ ಎಲ್ಲೂ ವಿದ್ಯಾರ್ಥಿ ಸಂಘಟನೆಗಳನ್ನು ನಿಷೇಧಿಸುವಂತೆ ಸಲಹೆ ನೀಡಿಲ್ಲ. ಹಾಗಾಗಿ ಕಾಲೇಜು ಚುನಾವಣೆಗಳಲ್ಲಿ ವಿದ್ಯಾರ್ಥಿ ಸಂಘಟನೆಗಳು ಸಕ್ರಿಯವಾಗಿ ಭಾಗವಹಿಸಲು ಅವಕಾಶ ನೀಡಬೇಕು'' ಎಂದು ಆಗ್ರಹಿಸಿದರು.

ವಕೀಲರು, ಅಖಿಲ ಭಾರತ ವಿದ್ಯಾರ್ಥಿ ಸಂಘದ () ಸಂಚಾಲಕಿ ಲೇಖಾ ಅಡವಿ, ''ಲಿಂಗ್ಡೋ ಸಮಿತಿ ಶಿಫಾರಸಿನ ಪ್ರಕಾರ ವಿದ್ಯಾರ್ಥಿ ಸಂಘಗಳ ಚುನಾವಣೆ ನಡೆಸಲು ಹೊರಟಿದೆ. ಇತರೆ ವಿವಿಗಳಲ್ಲೂ ಈ ಸಮಿತಿ ಪ್ರಕಾರ ನಡೆಯುತ್ತಿದ್ದರೂ ರಾಜಕೀಯ ವಿಚಾರಗಳನ್ನು ದೂರವಿಟ್ಟು ಮಾಡಿಸುತ್ತಿಲ್ಲ (ಉದಾಹರಣೆ: , , , , ಹಾಗೂ ಇತರೆ ವಿವಿಗಳು). ಸರ್ಕಾರವು ವಿದ್ಯಾರ್ಥಿ ಸಂಘದ ಚುನಾವಣೆಯನ್ನು ಮರುಸ್ಥಾಪಿಸುತ್ತಿರುವುದು ಪ್ರಜಾಪ್ರಭುತ್ವದ ಮೌಲ್ಯಗಳನ್ನು ವಿದ್ಯಾರ್ಥಿಗಳ ನಡುವೆ ಕೊಂಡೊಯ್ಯಲು. ಫ್ಯಾಸಿಸಂ ತಲೆ ಮೇಲೇರಿರುವಾಗ ಸಾಂವಿಧಾನಿಕ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳು ಮುಖ್ಯವಾಗಿದ್ದರೆ, ರಾಜಕೀಯ/ಸೈದ್ಧಾಂತಿಕ ವಿಚಾರಗಳು ಚುನಾವಣೆಯಲ್ಲಿರುವುದು ಬಹುಮುಖ್ಯವಾಗಿದೆ. ಇಲ್ಲದಿದ್ದರೆ ವಿದ್ಯಾರ್ಥಿಗಳಿಗೆ ರಾಜಕೀಯ ಪ್ರಜ್ಞೆ ಹೇಗೆ ನೀಡಬೇಕು'' ಎಂದು ಪ್ರಶ್ನಿಸಿದರು.

ಹೀಗೆ ಅಧಿಕಾರದಲ್ಲಿ ಬಿಜೆಪಿ ಇರಲಿ ಅಥವಾ ಕಾಂಗ್ರೆಸ್ ಇರಲಿ, ಪ್ರತಿಯೊಂದು ರಾಜಕೀಯ ಪಕ್ಷವೂ ಆಡಳಿತಕ್ಕೆ ಬಂದಾಗ ಕ್ಯಾಂಪಸ್ ಪ್ರಜಾಪ್ರಭುತ್ವವನ್ನು ಹತೋಟಿಯಲ್ಲಿಡಲು ಒಂದೇ ರೀತಿಯ ಧೋರಣೆಯನ್ನು ತಳೆಯುತ್ತವೆ ಎಂಬುದು ಕಹಿ ಸತ್ಯ. ವಿರೋಧ ಪಕ್ಷದಲ್ಲಿದ್ದಾಗ ವಿದ್ಯಾರ್ಥಿ ಸಂಘಟನೆಗಳ ಹಕ್ಕುಗಳು ಮತ್ತು ಚುನಾವಣೆಯ ಪರವಾಗಿ ಧ್ವನಿ ಎತ್ತುವ ನಾಯಕರು, ಅಧಿಕಾರಕ್ಕೆ ಬರುತ್ತಿದ್ದಂತೆ ಅದೇ ವಿದ್ಯಾರ್ಥಿ ಸಂಘಟನೆಗಳನ್ನು ಸಂಶಯದ ಕಣ್ಣಿನಿಂದ ನೋಡಲು ಪ್ರಾರಂಭಿಸುತ್ತಾರೆ. ಯುವಜನರು ಪ್ರಶ್ನೆ ಮಾಡುವುದನ್ನು ಕಲಿಯುತ್ತಾರೆ, ಸರ್ಕಾರದ ತಪ್ಪು ನೀತಿಗಳನ್ನು ಕ್ಯಾಂಪಸ್‌ಗಳಲ್ಲಿ ಪ್ರತಿಭಟಿಸುತ್ತಾರೆ ಎಂಬ ಭಯವೇ ಎಲ್ಲಾ ಸರ್ಕಾರಗಳು ವಿದ್ಯಾರ್ಥಿ ಸಂಘಟನೆಗಳನ್ನು ಕ್ಯಾಂಪಸ್‌ಗಳಿಂದ ದೂರವಿಡಲು ಮೂಲ ಕಾರಣ ಎಂಬುದು ಸ್ಪಷ್ಟ.

ಪ್ರಜಾಪ್ರಭುತ್ವದ ತಳಹದಿಯನ್ನು ಗಟ್ಟಿಗೊಳಿಸಬೇಕಾದ ಸರ್ಕಾರಗಳೇ ಈ ರೀತಿ ಕ್ಯಾಂಪಸ್‌ಗಳಲ್ಲಿ ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಹಸಿಬಿಸಿಯಾಗಿ ಹಸಿಗೋಡೆಗೆ ತಳ್ಳುತ್ತಿರುವುದು ತೀವ್ರ ಖಂಡನೀಯ. ಲಿಂಗ್ಡೋ ಸಮಿತಿಯಂತಹ ಸ್ಪಷ್ಟ ಮಾರ್ಗದರ್ಶಿ ಸೂತ್ರಗಳಿದ್ದಾಗಲೂ, ಹಿಂಸಾಚಾರ ಅಥವಾ ರಾಜಕೀಯದ ನೆಪವೊಡ್ಡಿ ಇಡೀ ವಿದ್ಯಾರ್ಥಿ ಸಮುದಾಯದ ಪ್ರಾತಿನಿಧ್ಯವನ್ನೇ ಕಸಿದುಕೊಳ್ಳುವ ಸರ್ಕಾರ ಧೋರಣೆ ಸರಿಯಲ್ಲ. ಪ್ರಜಾಪ್ರಭುತ್ವವು ಕೇವಲ ವಿಧಾನಸಭಾ ಅಥವಾ ಲೋಕಸಭಾ ಚುನಾವಣೆಗಳಿಗೆ ಸೀಮಿತವಾಗಿರದೆ, ಯುವಜನರನ್ನು ಜವಾಬ್ದಾರಿಯುತ ಪ್ರಜೆಗಳನ್ನಾಗಿ ರೂಪಿಸುವ ಕಾಲೇಜು ಕ್ಯಾಂಪಸ್‌ಗಳಿಂದಲೇ ಆರಂಭವಾಗಬೇಕಿದೆ. ಆದ್ದರಿಂದ ಸರ್ಕಾರ ತನ್ನ ಇಬ್ಬಂದಿ ನೀತಿಯನ್ನು ಬಿಟ್ಟು, ತಕ್ಷಣವೇ ನಿಯಮಾನುಸಾರ ವಿದ್ಯಾರ್ಥಿ ಸಂಘಗಳ ಚುನಾವಣೆಗೆ ಅವಕಾಶ ಮಾಡಿಕೊಡಬೇಕಿದೆ.

ಪಿ.ಚಿದಂಬರಂ ಅವರ ಲೇಖನ ಅಂಕಿಅಂಶಗಳಿಗೆ ಹಿಡಿದ ಕನ್ನಡಿ

ತಮ್ಮ ಸುತ್ತಮುತ್ತಲಿನ ವ್ಯವಸ್ಥೆ ಇಷ್ಟೊಂದು ಹದಗೆಟ್ಟಿರುವುದನ್ನು ನೋಡಿ ಇಂದಿನ ಯುವಪೀಳಿಗೆ ( ) ಬೀದಿಗಿಳಿದು ಪ್ರತಿಭಟಿಸುತ್ತಿರುವುದರಲ್ಲಿ ಯಾವುದೇ ಆಶ್ಚರ್ಯವಿಲ್ಲ. ಕಾಗದದ ಮೇಲೆ ನಾವು ಶೇಕಡ 7.8ರ ದರದಲ್ಲಿ ಬೆಳೆಯುತ್ತಿರಬಹುದು. ಆದರೆ ದೇಶದ ಜನಸಾಮಾನ್ಯರಿಗೆ ಅದು ನಿಜವೆಂದು ಅನ್ನಿಸುತ್ತಲೇ ಇಲ್ಲ. ಏಕೆಂದರೆ, ಅವರ ದೈನಂದಿನ ಬದುಕು ಸುಲಭವಾಗಿಲ್ಲ, ಸುಧಾರಿಸಿಯೂ ಇಲ್ಲ ಎಂಬ ಕಹಿ ಸತ್ಯ ಅವರಿಗೆ ಚೆನ್ನಾಗಿ ಗೊತ್ತಿದೆ.

ಯಾರೋ ತಮಾಷೆಯಾಗಿ ಹೇಳಿದಂತೆ, ಜನ ಜಿಡಿಪಿ ಅಂಕಿಅಂಶಗಳನ್ನು ತಿಂದು ಬದುಕಲ್ಲ. ಜನರಿಗೆ ಊಟಕ್ಕೆ ಅನ್ನ ಬೇಕು, ಮೈಗೆ ಬಟ್ಟೆ, ಕಾಲಿಗೆ ಚಪ್ಪಲಿ ಬೇಕು. ಮಕ್ಕಳಿಗೆ ಒಳ್ಳೆಯ ಶಾಲೆ, ಕಾಯಿಲೆಗೆ ಔಷಧ, ಕೈಗೊಂದು ಮೊಬೈಲ್ ಬೇಕು. ಟಿವಿ ನೋಡಬೇಕು, ಸೋಶಿಯಲ್ ಮೀಡಿಯಾ ಜಾಲಾಡಬೇಕು, ನೆಮ್ಮದಿಯಾಗಿ ಸುರಕ್ಷಿತವಾಗಿ ಬದುಕಬೇಕು. ಇದನ್ನೇ ಅರ್ಥಶಾಸ್ತ್ರದಲ್ಲಿ ಬಳಕೆ () ಅಂತಾರೆ. ಜನರ ಬಳಕೆ (), ಹೂಡಿಕೆ (), ಸರ್ಕಾರದ ಖರ್ಚು () ಇವೆಲ್ಲಾ ಸೇರಿಸಿ ಅದಕ್ಕೆ ರಫ್ತನ್ನು ಕೂಡಿ, ಆಮದು ಕಳೆದು, ತೆರಿಗೆ ಸೇರಿಸಿ, ಸಬ್ಸಿಡಿ ಕಳೆದರೆ ಸಿಗುವುದೇ ಒಟ್ಟು ಆಂತರಿಕ ಉತ್ಪನ್ನ- ಅಂದರೆ ಜಿಡಿಪಿ. ದೇಶದ ಆರ್ಥಿಕ ಆರೋಗ್ಯ ಹೇಗಿದೆ ಎಂದು ತಿಳಿಯಲು ಈ ಜಿಡಿಪಿ, ಅದರಲ್ಲೂ ಮುಖ್ಯವಾಗಿ ಅದು ಬೆಳೆಯುತ್ತಿರುವ ದರ ಬಹಳ ಮುಖ್ಯವಾಗುತ್ತದೆ.

ಆರೋಗ್ಯಕರ ಚರ್ಚೆ

ಸಂಖ್ಯಾಶಾಸ್ತ್ರ ಸಚಿವಾಲಯವು () 2026-27ರ ಮೊದಲ ತ್ರೈಮಾಸಿಕದ ಜಿಡಿಪಿ ಅಂಕಿಅಂಶಗಳನ್ನು ಬಿಡುಗಡೆ ಮಾಡಿದೆ. ಹಿಂದಿನ ವರ್ಷದ (2025-26) ಇದೇ ಮೊದಲ ತ್ರೈಮಾಸಿಕಕ್ಕೆ ಹೋಲಿಸಿದರೆ, ಚಾಲ್ತಿ ಬೆಲೆಗಳಲ್ಲಿ ಬೆಳವಣಿಗೆ ದರ ಶೇಕಡ 10.3 ರಷ್ಟಿದೆ. ಸ್ಥಿರ ಬೆಲೆಗಳಲ್ಲಿ ಇದು ಶೇಕಡ 7.8 ರಷ್ಟಿದೆ. ಇದನ್ನು ಕಂಡು ಸರ್ಕಾರ ಮತ್ತು ಸರ್ಕಾರದ ಅರ್ಥಶಾಸ್ತ್ರಜ್ಞರು ತುಂಬಾನೆ ಖುಷಿಯಾಗಿದ್ದಾರೆ. ಆದರೆ ಅನುಮಾನ ಇರುವವರು ಹಲವು ಗಂಭೀರ ಪ್ರಶ್ನೆಗಳನ್ನು ಎತ್ತಿದ್ದಾರೆ. ಈ ಜಿಡಿಪಿ ಅಂಕಿಅಂಶಗಳನ್ನು ಎಷ್ಟರ ಮಟ್ಟಿಗೆ ನಂಬಬಹುದು ಅನ್ನುವುದರ ಬಗ್ಗೆ ಈಗ ದೊಡ್ಡ ವಾಗ್ವಾದವೇ ನಡೆಯುತ್ತಿದೆ. ನಮ್ಮ ಒಕ್ಕೂಟ ವ್ಯವಸ್ಥೆಯ ಸಂಸದೀಯ ಪ್ರಜಾಪ್ರಭುತ್ವಕ್ಕೇ ಪೆಟ್ಟು ಕೊಡುವ ಒಂದು ದೇಶ, ಒಂದು ಚುನಾವಣೆ ಬಗ್ಗೆ ಚರ್ಚೆ ಮಾಡುವುದಕ್ಕಿಂತ, ಈ ಜಿಡಿಪಿ ಅಂಕಿಅಂಶಗಳ ಬಗ್ಗೆ ಚರ್ಚಿಸುವುದು ಒಳ್ಳೆಯದು. ದೇಶದ ಆರ್ಥಿಕ ಬೆಳವಣಿಗೆಯ ಲಾಭ ನಿಜವಾಗಿಯೂ ಜನಸಾಮಾನ್ಯರಿಗೆ ಮುಟ್ಟುತ್ತಿದೆಯೇ ಎಂದು ಪರಿಶೀಲಿಸುವುದು ಹೆಚ್ಚು ಸೂಕ್ತ.

ನಾನಿಲ್ಲಿ ಈ ಗದ್ದಲವನ್ನು ಇನ್ನಷ್ಟು ಹೆಚ್ಚು ಮಾಡಲು ಬಯಸುವುದಿಲ್ಲ.

ಸರ್ಕಾರದ ಅಂಕಿಅಂಶಗಳೇ ಸರಿ ಅಂತಲೇ ಇಟ್ಟುಕೊಳ್ಳೋಣ. ಹಳೆಯ ಮತ್ತು ಹೊಸ ಮೂಲ ವರ್ಷಗಳನ್ನು ( ) ಇಟ್ಟುಕೊಂಡು, ನೈಜ ಹಾಗೂ ನಾಮಮಾತ್ರ ಜಿಡಿಪಿಯ ಸಂಯುಕ್ತ ವಾರ್ಷಿಕ ಬೆಳವಣಿಗೆ ದರವನ್ನು () ನಾನು ಲೆಕ್ಕ ಹಾಕಿದ್ದೇನೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಹಳೆಯ ಮೂಲ ವರ್ಷದಲ್ಲಾಗಲಿ ಅಥವಾ ಹೊಸ ಮೂಲ ವರ್ಷದಲ್ಲಾಗಲಿ, 2022-23ರಿಂದ ಪ್ರಾರಂಭವಾಗುವ ವಾರ್ಷಿಕ ಬೆಳವಣಿಗೆ ದರ ಹೆಚ್ಚು ಕಡಿಮೆ ಒಂದೇ ಆಗಿದೆ. 2026-27ರ ಮೊದಲ ತ್ರೈಮಾಸಿಕದ ಬೆಳವಣಿಗೆ ದರ ಸ್ವಲ್ಪ ಹೆಚ್ಚಿದೆ ಅಷ್ಟೆ. ಇದರ ಅಂತಿಮ ತೀರ್ಮಾನ ಇಷ್ಟೇ: ನಮ್ಮ ಆರ್ಥಿಕತೆಯು 2026-27ರಲ್ಲಿ ಗೇರ್ ಬದಲಾಯಿಸಿಲ್ಲ, ಅದು ಅತಿವೇಗದ ಓವರ್‌ಡ್ರೈವ್‌ನಲ್ಲೂ ಇಲ್ಲ. ಹೀಗಾಗಿ, ನಾವು ದೊಡ್ಡದಾಗಿ ಕೊಚ್ಚಿಕೊಳ್ಳಲು ಅಥವಾ ಬೆನ್ನು ತಟ್ಟಿಕೊಳ್ಳಲು ಇಲ್ಲಿ ಯಾವುದೇ ಬಲವಾದ ಆಧಾರವಿಲ್ಲ.

ಕೆಲವು ಪ್ರಶ್ನೆಗಳು

ಈಗ ಬಿಡುಗಡೆಯಾಗಿರುವ ಜಿಡಿಪಿ ಅಂಕಿಅಂಶಗಳಿಗೆ ಒಮ್ಮೆ ಕನ್ನಡಿ ಹಿಡಿದು ನೋಡೋಣ. ಇಲ್ಲಿ ಸದಾ ಕಾಡುವ ಒಂದು ಪ್ರಶ್ನೆಯಿದೆ. ಹಳೆಯ ಮೂಲ ವರ್ಷದ ಲೆಕ್ಕದಲ್ಲಿ, ಚಾಲ್ತಿ ಬೆಲೆಗಳ ಜಿಡಿಪಿಗೆ ಹೋಲಿಸಿದರೆ ಸ್ಥಿರ ಬೆಲೆಗಳ ಜಿಡಿಪಿ ತೀರಾ ಕುಸಿದುಹೋಗಿತ್ತು. ಆದರೆ ಹೊಸ ಮೂಲ ವರ್ಷದ ಲೆಕ್ಕದಲ್ಲಿ ಹಾಗೇಕೆ ಆಗಿಲ್ಲ? ಇದು ಏಕೆ ಹೀಗಾಯಿತು?

ಅದೇನೇ ಇರಲಿ, ದೇಶ ನಿಜವಾಗಿಯೂ ಬೆಳೆಯುತ್ತಿದ್ದರೆ ಅದು ಉದ್ಯೋಗ, ಕೂಲಿ, ಜನರ ಬಳಕೆ, ವ್ಯಾಪಾರ ಮತ್ತು ಹೂಡಿಕೆಯಂತಹ ವಿಷಯಗಳಲ್ಲಿ ಕಾಣಿಸಬೇಕು. ಇಲ್ಲಿ ಕೆಲವು ಪ್ರಮುಖ ಪ್ರಶ್ನೆಗಳು ಎದುರಾಗುತ್ತವೆ:

ಮೊದಲನೆಯದಾಗಿ, 15ರಿಂದ 29 ವರ್ಷದ ಯುವಜನರಲ್ಲಿ ನಿರುದ್ಯೋಗ ದರ ಶೇಕಡ 16.2ರಷ್ಟು ಗರಿಷ್ಠ ಮಟ್ಟದಲ್ಲಿ ಇರುವುದೇಕೆ? 29ರಿಂದ 34 ವರ್ಷದ ಪದವೀಧರರಲ್ಲಿ ನಿರುದ್ಯೋಗ ದರ ಶೇಕಡ 40ರಿಂದ 45ರಷ್ಟಿದೆ ಎಂದು ಸಿಎಂಐಇ ವರದಿ ಹೇಳುತ್ತದೆ; ಇದು ಯಾಕೆ? ನೀತಿ ಆಯೋಗದ ಪ್ರಕಾರವೇ 15ರಿಂದ 29 ವರ್ಷದ ಸುಮಾರು 8.7 ಕೋಟಿ ಯುವಕರು ಕೆಲಸವಿಲ್ಲದೆ, ಶಿಕ್ಷಣವೂ ಇಲ್ಲದೆ, ಯಾವುದೇ ತರಬೇತಿಯೂ ಪಡೆಯದೆ () ಸುಮ್ಮನೆ ಕೂತಿದ್ದಾರೆ. ಏಕೆ ಹೀಗೆ?

ಎರಡನೆಯದಾಗಿ, ದಿನಗೂಲಿ ನೌಕರರು, ವೇತನ ಪಡೆಯುವ ನೌಕರರು ಮತ್ತು ಸ್ವಯಂ ಉದ್ಯೋಗಿಗಳಲ್ಲಿ ನೈಜ ಕೂಲಿಯು ಕ್ರಮವಾಗಿ ಮೈನಸ್ 5.5, 1.7 ಮತ್ತು 3.3ರಷ್ಟು ಕಳಪೆಯಾಗಿರುವುದೇಕೆ? ನಮ್ಮ ದೇಶದ ಒಟ್ಟು ಕಾರ್ಮಿಕರಲ್ಲಿ ದಿನಗೂಲಿ ಕಾರ್ಮಿಕರೇ ಶೇಕಡ 20ರಷ್ಟಿದ್ದಾರೆ. ಹೀಗೆ ಕೂಲಿ ಮೈನಸ್ಸಲ್ಲಿ ಬೆಳೆಯುತ್ತಿದ್ದರೆ ಈ ಕಾರ್ಮಿಕರು ಮತ್ತಷ್ಟು ಬಡವರಾಗುವುದಿಲ್ಲವೇ?

ಮೂರನೆಯದಾಗಿ, ದೇಶಕ್ಕೆ ಹರಿದುಬರುತ್ತಿರುವ ನಿವ್ವಳ ವಿದೇಶಿ ನೇರ ಬಂಡವಾಳ () ಇಷ್ಟು ಪಾತಾಳಕ್ಕೆ ಕುಸಿದಿರುವುದೇಕೆ? ಶೇಕಡ [illegible] 7ರಷ್ಟು ಬಡ್ಡಿ ನೀಡುವ ಎಫ್‌ಸಿಎನ್‌ಆರ್ (-) ಠೇವಣಿಗಳು ಮಾತ್ರ ಲಾರಿಗಟ್ಟಲೆ ರಾಶಿ ಬಂದು ಬೀಳುತ್ತಿವೆ. ಆದರೆ ಕೈಗಾರಿಕೆಗಳಲ್ಲಿ ತೊಡಗಿಸುವ ನಿಜವಾದ ವಿದೇಶಿ ಬಂಡವಾಳ ನೇರ ಹೂಡಿಕೆಯಾಗಿ ಏಕೆ ಬರುತ್ತಿಲ್ಲ?

ನಾಲ್ಕನೆಯದಾಗಿ, ನಮ್ಮ ವಿದೇಶಿ ವಿನಿಮಯ ಮೀಸಲು ನಿಧಿ ಬರೋಬ್ಬರಿ 74,000 ಕೋಟಿ ಅಮೆರಿಕನ್ ಡಾಲರ್ ಮುಟ್ಟಿ ಸಾರ್ವಕಾಲಿಕ ದಾಖಲೆ ಸಾಧಿಸಿದೆ. ಆದರೂ ರೂಪಾಯಿಯ ಮೌಲ್ಯ ಏಕೆ ಚೇತರಿಸಿಕೊಳ್ಳುತ್ತಿಲ್ಲ? 2026ರ ಜನವರಿಯಿಂದೀಚೆಗೆ ಅಮೆರಿಕನ್ ಡಾಲರ್ ಎದುರು ರೂಪಾಯಿ ಮೌಲ್ಯ ಸುಮಾರು ಶೇಕಡ 5ರಷ್ಟು ಕುಸಿದಿದೆ. ಇಡೀ ಏಷ್ಯಾದಲ್ಲೇ ಅತ್ಯಂತ ಕಳಪೆ ಪ್ರದರ್ಶನ ನೀಡಿದ ಕರೆನ್ಸಿ ನಮ್ಮ ರೂಪಾಯಿ ಎಂದು ವರದಿಯಾಗಿದೆ. ಇದಕ್ಕೆ ಕಾರಣವೇನು?

ಐದನೆಯದಾಗಿ, ನಮ್ಮ ರಫ್ತುಗಳು ಹೆಚ್ಚುತ್ತಿವೆ ನಿಜ, ಆದರೆ ಆಮದುಗಳು ಕೂಡ ಏರುತ್ತಿವೆ. ಚಾಲ್ತಿ ಬೆಲೆಗಳಲ್ಲಿ ನೋಡಿದರೆ ಆಮದುಗಳು ರಫ್ತಿಗಿಂತಲೂ ವೇಗವಾಗಿ ಬೆಳೆಯುತ್ತಿವೆ. 2026ರ ಏಪ್ರಿಲ್‌ನಿಂದ ಆಗಸ್ಟ್‌ವರೆಗಿನ ಅವಧಿಯಲ್ಲೇ ಸರಕು ವ್ಯಾಪಾರ ಕೊರತೆಯು 15,000 ಕೋಟಿ ಡಾಲರ್‌ಗಳನ್ನು ಮುಟ್ಟಿದೆ. ಕೇವಲ ಏಪ್ರಿಲ್‌ನಿಂದ ಜುಲೈವರೆಗಿನ ಅವಧಿಯಲ್ಲಿ ಚೀನಾದೊಂದಿಗಿನ ವ್ಯಾಪಾರ ಕೊರತೆಯೇ ಬರೋಬ್ಬರಿ 4,400 ಕೋಟಿ ಡಾಲರ್ ಆಗಿದೆ. ಈ ವ್ಯಾಪಾರ ಕೊರತೆಯು ಆರ್ಥಿಕತೆಗೆ ದೊಡ್ಡ ಹೊರೆಯಲ್ಲವೇ? ಮೇಕ್ ಇನ್ ಇಂಡಿಯಾ, ಪಿಎಲ್‌ಐ, ಆಸ್ಪೈರ್, ಎನ್‌ಎಂಸಿಪಿ ಮುಂತಾದ ಹತ್ತಾರು ಸರ್ಕಾರಿ ಯೋಜನೆಗಳಿದ್ದರೂ, ನಾವು ಚೀನಾದಿಂದ ಆಮದು ಮಾಡಿಕೊಳ್ಳುವ ವಸ್ತುಗಳನ್ನು ನಮ್ಮ ದೇಶದಲ್ಲೇ ತಯಾರಿಸಲು ಏಕೆ ಸಾಧ್ಯವಾಗುತ್ತಿಲ್ಲ?

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR